ಏಳು ಯಕ್ಷಗಾನ
ಪೌರಾಣಿಕ ಪ್ರಸಂಗಗಳು

ಸಂಗ್ರಹಕಾರರು

ಜೆ.ಎನ್. ಅನಂತವರ್ಧನ

Scanned by CamScanner

ಏಳು ಯಕ್ಷಗಾನ
ಪೌರಾಣಿಕ ಪ್ರಸಂಗಗಳು

ಸಂಗ್ರಹಕಾರರು

ಜಿ.ಎನ್. ಅನಂತವರ್ಧನ

ಪ್ರಕಾಶಕರು

ನವಭಾರತೀ ಪ್ರಕಾಶನ

ಸರಸ್ವತಿಪುರಂ, ಮೈಸೂರು-೫೭೦ ೦೦೯

Scanned by CamScanner

Seven Yakshagana Mythological Text - collected and Edited by G.N. Ananthavardhana and Published by Navabharathi Prakashana, Saraswathipuram, Mysore-570 009
First Edition : 2012
ಮೊದಲನೆಯ ಮುದ್ರಣ : 2012

Pages : 252
ಪುಟಗಳು : ೨೫೨

Price : 100/-

ಬಳಸಿರುವ ಕಾಗದ : ೫೮ ಜಿಎಸ್‌ಎಂ ಭದ್ರಾವತಿ

ಆರ್ಥಿಕ ನೆರವು :
ಶ್ರೀಮತಿ ನಾಗಲಕ್ಷ್ಮೀ ಹರಿಹರೇಶ್ವರ, ಮೈಸೂರು
ಶ್ರೀಮತಿ ವಿಜಯರಾಜ್ ಜೋಷಿ, ಮೈಸೂರು

ಅಕ್ಷರ ಜೋಡಣೆ :
ಹರ್ಷ ಪ್ರಿಂಟರ್ಸ್
ದೂರವಾಣಿ : 2332176

ಮುದ್ರಣ :
ಉದಯರವಿ ಆಫ್‌ಸೆಟ್ ಪ್ರಿಂಟರ್ಸ್
ನಂ. 1354/1, 1ನೇ ಮೇನ್
ಕೃಷ್ಣಮೂರ್ತಿಪುರಂ, ಮೈಸೂರು - 570 004
ದೂರವಾಣಿ : 2332971 Mob : 94483 82971

ಅರ್ಪಣೆ

ಕೀರ್ತಿಶೇಷ. ಶಿಕಾರಿಪುರ ಹರಿಹರೇಶ್ವರ ಅವರಿಗೆ

1936-2010

Scanned by CamScanner

ಪ್ರಸ್ತಾವನೆ

'ಏಳು ಪೌರಾಣಿಕ ಯಕ್ಷಗಾನ ಪ್ರಸಂಗಗಳು' - ಎಂಬ ಯಕ್ಷಗಾನದ ಪುಸ್ತಕವು ಜುಲೈ ...೨, ೨೦೧೨ ರ ಭಾನುವಾರ ಹರಿಹರೇಶ್ವರ ಅವರ ಎರಡನೇ ಪುಣ್ಯತಿಥಿಯಂದೇ ...ಲೋಕಾರ್ಪಣೆಗೊಳ್ಳುತ್ತಿರುವುದು ತುಂಬಾ ವಿಶೇಷ ಹಾಗೂ ವಿಶಿಷ್ಟವಾಗಿದೆ. ಶ್ರೀ ...ಕಾರಿಪುರ ಹರಿಹರೇಶ್ವರ ಅವರು (೧೯೩೬-೨೦೧೦) ಮೂಲತಃ ಶಿವಮೊಗ್ಗದಲ್ಲಿ ವೈದಿಕ ...ರುನೆತನದಲ್ಲಿ ಹುಟ್ಟಿ ಬೆಳೆದವರು. ಜ್ಯೋತಿಷ್ಯ, ವೇದ, ಮಂತ್ರಗಳೊಡನೆ ಸಾಹಿತ್ಯ ...ಸಂಗೀತಾಸಕ್ತಿಯನ್ನು ಬೆಳೆಸಿಕೊಂಡರು. ಹರಿಯವರ ಸೋದರಮಾವ ಮತ್ತು ಅವರ ಮಕ್ಕಳು ...ಯಕ್ಷಗಾನ ಪ್ರಸಂಗಗಳಲ್ಲಿ ಭಾಗವತರಾಗಿಯೋ, ಸೂತ್ರಧಾರಿಯಾಗಿಯೋ, ...ಪಾತ್ರಧಾರಿಯಾಗಿಯೋ ಆಗಿರುತ್ತಿದ್ದರು. ಆದ್ದರಿಂದ ಇವರಿಗೆ ಸಹಜವಾಗಿ ಯಕ್ಷಗಾನದಲ್ಲಿ ...ಆಸಕ್ತಿ, ಪ್ರೀತಿ ಉಂಟಾಗಿತ್ತು ಅರ್ಥವಾಗದ ಭಾಗವನ್ನು ಮಾವನ ಹತ್ತಿರ ಕೇಳಿ ...ತಿಳಿದುಕೊಳ್ಳುತ್ತಿದ್ದರು. ಈ ಆಸಕ್ತಿಯ ಕಾರಣವೇ ಸುಮಾರು ೧೦೦ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಜತನವಾಗಿ ಕೂಡಿಕೊಂಡು ಬಂದಿದ್ದರು. ಹರಿ ಭಾರತದಿಂದ ಅಮೆರಿಕಾಕ್ಕೂ ಹೋದರೂ ಅಲ್ಲಿಯೂ ಸಹ ಅನೇಕ ಕನ್ನಡ ಸಮ್ಮೇಳನಗಳಲ್ಲಿ ಯಕ್ಷಗಾನವನ್ನು ಮಾಡಿಸಿ ಅಮೇರಿಕನ್ನಡಿಗರಿಗೆ ಮನರಂಜನೆ ನೀಡಿದ್ದಾರೆ. ನಮ್ಮ ದೇಶಿ ಯಕ್ಷಗಾನದ ಉಳಿವು ಅಳಿವಿನ ಬಗ್ಗೆ ಹರಿಹರೇಶ್ವರರ ಪ್ರಧಾನ ಸಂಪಾದಕತ್ವದ 'ಅಮೇರಿಕನ್ನಡ'ದ ಪತ್ರಿಕೆಯಲ್ಲಿ ...ಎರಡು ಸಂಚಿಕೆಗಳು ಯಕ್ಷಗಾನಕ್ಕೆ ಮೀಸಲಾಗಿರಿಸಿದ್ದರು.

ಈ ಪ್ರಸಂಗಗಳು ಮತ್ತೆ ಪ್ರಚಲಿತಕ್ಕೆ ಬರಲಿ ಎಂದು ಯಕ್ಷಗಾನದಲ್ಲಿ ತುಂಬಾ ಆಸಕ್ತಿವುಳ್ಳ, ಜಿ.ಎನ್. ಅನಂತವರ್ಧನ ಅವರಿಗೆ ೧೦೦ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಹೊಂದಿರುವ ಪುಸ್ತಕಗಳನ್ನು ಹಸ್ತಾಂತರಿಸಿದೆ. ಅನಂತವರ್ಧನ ಅವರು ಅವುಗಳಲ್ಲಿ ಮೊದಲ ಹಂತವಾಗಿ ಹರಿಯವರಿಗೆ ತುಂಬಾ ಇಷ್ಟವಾದ ಈ ಏಳು ಪ್ರಸಂಗಗಳನ್ನು ತಿಳಿದವರಿಂದ ಕಥೆ, ತಾತ್ಪರ್ಯ, ಸಮಯ, ಸಂದರ್ಭಗಳನ್ನು ವಿವರಿಸಿ, ಡಿ.ಟಿ.ಪಿ. ಮಾಡಿಸಿ ಪುಸ್ತಕ ಹೊರತರಲು ಸಹಕರಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಕರಾವಳಿ ಯಕ್ಷಗಾನ ಕೇಂದ್ರದವರು ಈ ಪ್ರಸಂಗಗಳನ್ನು ಹಲವಾರು ಬಾರಿ ಆಗಲೇ ಪ್ರದರ್ಶಿಸಿದ್ದಾರೆ. ಹರಿಯವರ ಎರಡನೇ ಪುಣ್ಯತಿಥಿಯಂದೂ ಸಹ ಶ್ರೀ ಸಾಮಗ ಮತ್ತು ಶ್ರೀ ಧನಂಜಯ ಅವರ ನಿರ್ದೇಶನದಲ್ಲಿ 'ಪಾಶುಪತಾಸ್ತ್ರ' ಎಂಬ ಪ್ರಸಂಗವನ್ನು ಆಡಲಿದ್ದಾರೆ. ಅವರಿಗೂ ಸಹ ನನ್ನ ವಂದನೆಗಳು.

Scanned by CamScanner

ಬಹಳ ಅತ್ಯಲ್ಪ ಕಾಲದಲ್ಲೇ ಈ ಪುಸ್ತಕವನ್ನು ಪ್ರಕಾಶಿಸಲು ಕಾರಣಕರ್ತರಾ ಮೈಸೂರಿನ ಹೆಸರಾಂತ ನವ ಭಾರತೀ ಪ್ರಕಾಶನದ ಶ್ರೀಮತಿ ಬಿ.ಎನ್. ತುಂಗಮ್ಮ ಅವರಿ ಧನ್ಯವಾದಗಳು . ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಮೈಸೂರಿನ ಉದಯರ ಮುದ್ರಣಾಲಯದ ಶ್ರೀ ಎಂ.ಜಿ. ಕೃಷ್ಣಮೂರ್ತಿ ಮತ್ತು ಶ್ರೀ ಎಂ.ಜಿ. ಬ್ರಹ್ಮಣ್ಯ ಹಾಗು ಅವರ ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಅಮೇರಿಕೆಯ ಶ್ರೀಮತಿ ವಿಜಯ ಮತ್ತು ಶ್ರೀ ರಾಜ್‌ಜೋಷಿ ಅವರು ಈ ಪುಸ್ತ ಪ್ರಕಟಿಸಲು ಆರ್ಥಿಕ ಸಹಾಯ ನೀಡಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ಮನಃ ಪೂರ್ವ ವಂದನೆಗಳು.

ನಮ್ಮ ಮನೆ ಹುಡುಗ ಮಲ್ಲಿಕಾರ್ಜುನ ನನ್ನ ಜೊತೆ ಇಲ್ಲದಿದ್ದರೆ ಇಷ್ಟೆಲ್ಲ ಕೆಲ ಮಾಡಲು ಸಾಧ್ಯವಾಗುತ್ತಿರಲಿಲ್ಲ, ನಮ್ಮ ನಾಗರತ್ನಳ ಪ್ರೇಮ, ಮಲ್ಲಿಕಾರ್ಜುನನ ಪ್ರೀತಿ ವಿಶ್ವಾಸ ನಂಬಿಕೆ ನನ್ನನ್ನು ಇಲ್ಲಿಯವರೆಗೂ ಕರೆದುಕೊಂಡು ಬಂದಿದೆ.

ಆತ್ಮೀಯ ಸಹೃಯದರೇ ಹರಿಹರೇಶ್ವರ ಅವರ ಇಪ್ಪತ್ತೆರಡಕ್ಕೂ ಹೆಚ್ಚು ಪುಸ್ತಕಗಳನ ಬಹಳ ಅಭಿಮಾನ ಪೂರ್ವಕವಾಗಿ ಕೊಂಡು ಓದಿ ತಮ್ಮ ಅಭಿಪ್ರಾಯ ತಿಳಿಸಿ ಬಹ ಉಪಕರಿಸಿದ್ದೀರಿ. ಹಾಗೆನೇ ಯಕ್ಷಗಾನ ಕುರಿತಾದ ಈ 'ಏಳು ಪೌರಾಣಿಕ ಯಕ್ಷಗಾ ಪ್ರಸಂಗಗಳು' ಪುಸ್ತಕಗಳನ್ನು ಕೊಂಡು ಓದಿ ಆನಂದಿಸುವಿರೆಂದು ನಾನು ಭಾವಿಸುತ್ತೇನ ಓದುಗರೆಲ್ಲರಿಗೂ ನನ್ನ ಪ್ರಣಾಮಗಳು.

- ಸ್ನೇಹದಲ್ಲಿ ನಿಮ್ಮ

ನಾಗಲಕ್ಷ್ಮೀ ಹರಿಹರೇಶ್ವ

ಮೈಸೂರ

ಪರಿವಿಡಿ

೧. **ಗಣಪತಿ ಪ್ರತಾಪ** ೯
ಕವಿ : ಉಜ್ರೆ ವಾಸುದೇವ ನ್ಯಾಕ
(ಪದ್ಯಗಳು - ೩೩೯)
(ಮೊದಲನೆ ಅಚ್ಚು : ೧೯೫೧
ಆರ್. ವಿಟ್ಟಪ್ಪ ಶೆಣ್ಯೆ, ಪುಸ್ತಕ ವ್ಯಾಪಾರಿ, ಕಾರ್ಕಳ)

೨. **ನಾರದಪ್ರತಾಪ** ೪೧
ಕವಿ : ಹೆಬ್ರಿ ಖಂಡಿಗ ಪದ್ಮನಾಭ ಜನ್ನೇರಿ
(ಪದ್ಯಗಳು - ೬೮೨)
(ಮೊದಲನೆ ಅಚ್ಚು : ೩೦-೬-೧೯೫೬
ಉಡುಪಿ ಮೆಜಿಸ್ಟಿಕ್ ಪ್ರೆಸ್ ಮುದ್ರಣ ; ಪ್ರಕಾಶನ
ಕಾರ್ಕಳ ತಾಲ್ಲೂಕು ಹೆಬ್ರಿ ಖಂಡಿಗಾ ಪದ್ಮನಾಭ ಜನ್ನೇರಿ ಅವರಿಂದ

೩. **ವಿಶ್ವಾಮಿತ್ರ ಪ್ರತಾಪ (ದುಷ್ಯಂತ ಚರಿತ್ರೆ)** ೯೨
ಕವಿ : ಹೆಬ್ರಿ ಖಂಡಿಗ ಪದ್ಮನಾಭ ಜನ್ನೇರಿ
(ಪದ್ಯಗಳು - ೧೮೩ + ೨೧೫)
(ಮೊದಲನೆ ಅಚ್ಚು : ೩೦-೬-೧೯೫೬
ಉಡುಪಿ ಮೆಜಿಸ್ಟಿಕ್ ಪ್ರೆಸ್ ಮುದ್ರಣ, ಕಾರ್ಕಳ ತಾಲ್ಲೂಕು ; ಪ್ರಕಾಶನ
ಹೆಬ್ರಿ ಖಂಡಿಗಾ ಪದ್ಮನಾಭ ಜನ್ನೇರಿ ಅವರಿಂದ)

೪. **ಶಿವನಾಮ ಮಹಿಮೆ** ೧೩೪
ಕವಿ : ಕ್ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್
(ಪದ್ಯಗಳು - ೩೮೩)
(ಮೊದಲನೆ ಅಚ್ಚು : ಮೇ, ೧೯೮೧
ಪ್ರಕಾಶನ : ಶ್ರೀ ಗೋಪಾಲಕೃಷ್ಣ ಪ್ರಕಾಶನ
ದೇಲಂಪಾಡಿ,ಕಾಸರಗೋಡು ತಾಲೂಕು)

೫. **ಅನಂತನ ವ್ರತ ಮಹಾತ್ಮೆ** ೧೬೫
ಪಂಡಿತರಿಂದ ಪರಿಶೋಧಿಸಲ್ಪಟ್ಟು, ಪಾವಂಜೆ ಗುರುರಾಯರಿಂದ ಪ್ರಕಟಿಸಲ್ಪಟ್ಟಿತು
(ಪದ್ಯಗಳು - ೨೫೬)

Scanned by CamScanner

೬. ಸಹದೇವ ದಿಗ್ವಿಜಯ ೧೮೭
ಕವಿ : ಎಸ್. ಗಣಪಯ್ಯ ಶೆಟ್ಟಿ
ಮುಖ್ಯಾಧ್ಯಾಪಕ, ನಾಡಬೈಲ್ ಬೋ.ಎ. ಶಾಲೆ, ಸೀತಾನದಿ
(ಪದ್ಯಗಳು - ೨೮೩)
(ಮೊದಲನೆ ಅಚ್ಚು : ೧೯೪೭
ಪ್ರಕಾಶನ : ಆರ್. ವಿಟ್ಟಪ್ಪ ಶೆಣ್ಯ ಅಂಡ್ ಸನ್ಸ್, ಕಾರ್ಕಳ)

೭. ದ್ರೌಪದೀ ಪ್ರತಾಪ ೨೧೩
ಕವಿ : ಕಡಂದಲೆ ಬಿ. ರಾಮರಾವ್, ಕಾರ್ಕಳ
ಪಾವಂಜೆ ಗುರುರಾಯರಿಂದ ಪ್ರಕಟಿಸಲ್ಪಟ್ಟಿತು
(ಪದ್ಯಗಳು - ೪೫೦)
ಆರನೆ ಅಚ್ಚು : ೧೯೪೮

ಗಣಪತಿ ಪ್ರತಾಪ

ಕಥಾಸಾರ

ದೇವರಾಜನು ಓಲಗವಿತ್ತು ಬೃಹಸ್ಪತಿ ಆಚಾರ್ಯರೊಡನೆ ರಾಜಕೀಯ ವಿಚಾರ ಮಾತನಾಡಿ ಸಭೆಯು ಮುಕ್ತಾಯವಾಗುವುದು.

ಈ ಹಿಂದೆ ದೇವತೆಗಳಿಂದ ನೊಂದಿರುವ ರಾಕ್ಷಸರು ಶುಕ್ರಾಚಾರ್ಯರನ್ನು ಕಂಡು ತಮಗೊದಗಿರುವ ಸ್ಥಿತಿಯನ್ನು ತಿಳಿಸಿ, ದೇವತೆಗಳನ್ನು ಜಯಿಸಿ ಅಮರಲೋಕವನ್ನು ಸ್ವಾಧೀನ ಪಡಿಸಿಕೊಂಡು ಆಳುವಂಥಾ ಒಬ್ಬ ಒಡೆಯನನ್ನು ಅನುಗ್ರಹಿಸಿರಿ ಎಂದು ಬೇಡಿಕೊಳ್ಳಲು ಶುಕ್ರಾಚಾರ್ಯರು "ಖಂಡಗದ ಮೈದಲ ಪಟ್ಟಣವನ್ನಾಳುವ ಚಕ್ರಪಾಣಿಯಲ್ಲಿ ಸಿಂಧುವೆಂಬ ರಾಕ್ಷಸ ರಾಜನು ಹುಟ್ಟಿ, ತ್ರಿಭುವನವನ್ನಾಳಲಿಕ್ಕಿರುವನು". ಆತನನ್ನು ನಿರೀಕ್ಷಿಸುತ್ತಾ ನೀವು ಇರಬೇಕಾಗಿ ಸೂಚಿಸಿ ಅವರನ್ನು ಕಳುಹಿಸುವನು.

ಚಕ್ರಪಾಣಿ ರಾಜನು ಓಲಗದಲ್ಲಿರುವಾಗ ನಾರದರ ಆಗಮನವಾಗುವುದು. ಸಂತಾನಾಕಾಂಕ್ಷಿಯಾದ ರಾಜನು ಸೂರ್ಯ ಯಜ್ಞ ಮಾಡುವಂತೆ ನಾರದರು ಅಪ್ಪಣೆಯಿತ್ತು ತೆರಳುವರು. ಆ ಪ್ರಕಾರ ರಾಜನು ಸೂರ್ಯ ಯಜ್ಞವನ್ನು ಮಾಡಿಸಲು ಸಿಂಧುವೆಂಬ ನಾಕರಣದಿಂದೊಪ್ಪತಕ್ಕ ಸಮುದ್ರದ ಧ್ವನಿಯಂತೆ ಕಂಠವಿರುವ ಶಿಶುವು ಜನನವಾಗುವುದು. ಜನಪತಿಯು ನಾಮಕರಣಾದಿಗಳನ್ನು ನಡೆಸಿ ಸಂತೋಷದಲ್ಲಿ ಇರುತಿದ್ದನು. ಸಿಂಧುವು ಕುಮಾರನಾಗಿ ಅಪ್ರತಿಮ ಸಾಹಸ ಕಾರ್ಯಗಳನ್ನು ನಡೆಸುತ್ತಿರುವಾಗ, ಶುಕ್ರಾಚಾರ್ಯರ ಅಪೇಕ್ಷೆಯಂತೆ ಶಿವನನ್ನು ತಪಸ್ಸಿನಿಂದ ಒಲಿಸಿ ವರಗಳನ್ನು ಪಡೆದು, ಸ್ವರ್ಗಕ್ಕೆ ದಾಳಿಯಿಟ್ಟು, ಸುರಪಾದಿಗಳನ್ನು ಸೋಲಿಸಿ, ಸೆರೆಹಿಡಿದು ಸ್ವರ್ಗವನ್ನಾಳುತ್ತಾನೆ.

ಆ ಮೇಲೆ ಪಾತಾಳವನ್ನು ಪ್ರವೇಶಿಸಿ, ನಾಗರಾಜನೊಡನೆ ಸಖ್ಯವನ್ನು ಬೆಳೆಸಿಕೊಂಡು, ಭೂಲೋಕಕ್ಕೆ ಬಂದು ತ್ರಿಭುವನ ರಾಜನಾಗಿ ಮೆರೆಯುತ್ತಾನೆ.

ಸೆರೆಮನೆಯಲ್ಲಿ ಬಂಧಿತನಾದ ದೇವೇಂದ್ರನು ದುಂಬಿಯ ರೂಪದಿಂದ ಯಾರಿಗೂ ಕಾಣದಂತೆ ಹೊರಟು ಕ್ಷೀರಸಾಗರದ ಬಳಿಗೆ ಹೋಗಿ ಶ್ರೀಮನ್ನಾರಾಯಣನೊಡನೆ ಒದಗಿದ ಆಪತ್ತಿನಿಂದ ಉದ್ಧರಿಸಬೇಕೆಂದು ಬೇಡಿಕೊಳ್ಳುತ್ತಾನೆ.

ಶ್ರೀಹರಿಯು ಗರುಡಗಮನನಾಗಿ ಬಂದು ಸಿಂಧನೊಡನೆ ಹಲವು ದಿನ ಯುದ್ಧ ಮಾಡಿ, ಅವನ ವೀರತ್ವಕ್ಕೆ ಮೆಚ್ಚಿ, ಅವನಿಗೆ ವರ ಕೊಡಲು, ಅವನ ಇಷ್ಟದಂತೆ ಪುರಪಾಲಕನಾಗಿ ಮೈದಲದಲ್ಲಿ ವಾಸಿಸುತ್ತಾನೆ. ಶ್ರೀಮಹಾವಿಷ್ಣುವು ಈ ರೀತಿಯಿಂದ ರಾಕ್ಷಸನಿಗೆ ಒಲಿದಿರುವ ವಿಷಯವನ್ನರಿತ ಋಷಿಗಳು ಇನ್ನುಮುಂದೆ ನಮ್ಮ ಸ್ಥಿತಿಯು ಶೋಚನೀಯವೆಂದೆಣಿಸಿ, ಕೈಲಾಸಗಿರಿಗೆ ತೆರಳಿ ಶ್ರೀ ಪರಶಿವನೊಡನೆ ಸಂಕಷ್ಟಗಳನ್ನು ಪರಿಹರಿಸೆಂದು ಅರಿಕೆ ಮಾಡಿಕೊಳ್ಳುವರು. ಅದಕ್ಕೆ "ಇನ್ನು ಮುಂದೆ ಶ್ರೀಗಣೇಶನು ಉದ್ಭವಿಸಿ ತಾಮಸಿಗಳಾದ ದುಷ್ಟರನ್ನು ನಿಗ್ರಹಿಸಿ ನಿಮಗೆ ಸುಖವನ್ನುಂಟು ಮಾಡುತ್ತಾನೆ, ಆದಕಾರಣ ನೀವು ಆತನನ್ನು ಭಜಿಸಿ ಅಷ್ಟರವರೆಗೆ ಸುಖವಾಗಿ ಇರಿ" ಎಂದು ಅಭಯವಿತ್ತು ಶ್ರೀಶಂಕರನು ಕಳುಹುತ್ತಾನೆ.

ಹೀಗಿರುತ್ತಿರಲು ಗೌರೀಶಂಕರರು ಕುಳಿತಿರುವ ಸಭಾಮಂಟಪದ ಪರಮ ಜ್ಯೋತಿರ್ಮಯ ... ಇವರ ಸನಿಯಕ್ಕೆ ಬಂದು ಸೇರುತ್ತಾನೆ.

Scanned by CamScanner

ಅನಂತನವ್ರತ ಮಹಾತ್ಮೆ

ಕಥಾಭಾಗ

ಕೌರವರಿಂದ ಕಪಟದ್ಯೂತದಲ್ಲಿ ಸೋತ ಧರ್ಮಜನು ಅನುಜರೊಡನೆ ದ್ರೌಪದೀ ಸಮೇತನಾಗಿ ಕಾಮ್ಯಕಾವನದಲ್ಲಿ ದಿನದೂಡುತ್ತಿರುವನು. ಪಾಂಡವರನ್ನು ವನವಾಸಕ್ಕೆ ಅಟ್ಟಿದ ಕಥೆಯನ್ನು ಕೇಳಿ ದ್ವಾರಕೆಯಲ್ಲಿ ಕೃಷ್ಣನು ಬಹುವಾಗಿ ನೊಂದುಕೊಂಡು ಅವರನ್ನು ಕಾಣುವುದಕ್ಕಾಗಿ ಧಾವಿಸಿ ಬರುವನು. ದ್ರೌಪದಿ, ಪಾಂಡವರು ಮಾತ್ರವಲ್ಲದೆ ವನದಲ್ಲಿದ್ದ ಋಷಿವರ್ಯರಿಂದಲೂ ಕೃಷ್ಣನು ಸತ್ಕಾರಗೊಂಡು ಎಲ್ಲರನ್ನು ಹರಸುವನು.

ಕೃಷ್ಣನು ಪಾಂಡವರನ್ನು ಕರೆದು ಕಳೆದುಕೊಂಡ ಸಿರಿ-ಸಾಮ್ರಾಜ್ಯವನ್ನು ಪಡೆಯಲು ಪ್ರತಿವರ್ಷವೂ ತಪ್ಪದಂತೆ ನಿಷ್ಠೆಯಿಂದ ಅನಂತನವ್ರತವನ್ನು ಮಾಡಿರೆಂದು ಹೇಳಿ ವ್ರತವನ್ನಾಚರಿಸುವ ಬಗೆಯನ್ನು ವಿವರಿಸಲು ಕುತೂಹಲಿಯಾದ ಧರ್ಮಜನು ಇದಕ್ಕೂ ಮುನ್ನ ಅನಂತನ ವ್ರತವನ್ನಾಚರಿಸಿ ನಿಜಫಲವನ್ನು ಪಡೆದ ಭಕ್ತರ ಕತೆಯನ್ನು ಹೇಳೆಂದು ಭಿನ್ನವಿಸಿಕೊಳ್ಳಲಾಗಿ ಕೃಷ್ಣನು ಕಥೆಯನ್ನು ಪ್ರಕಮಿಸುವನು.

ಹಿಂದೆ ಕೃತಯುಗದಲ್ಲಿ ಜ್ಞಾನಿಯೆಂದೆನಿಸಿದ ಸುಮಂತನೆಂಬ ದ್ವಿಜನು ಭೃಗುಸುತೆಯಾದ ಧರ್ಮಿಣಿಯೆಂಬ ಮಡದಿಯೊಂದಿಗೆ ಸುಖದಿಂದಿರಲು ಶೀಲೆಯೆಂಬ ಕುಮಾರಿಯು ಜನಿಸುವಳು. ಶೀಲೆಯು ಐದು ವರ್ಷದವಳಿರುವಾಗ ಧರ್ಮಿಣಿಯು ಕಾಲವಾಗಲು ಸುಮಂತನು ಚಂಡಿಯೆಂಬಾಕೆಯನ್ನು ವಿವಾಹವಾಗುವನು. ಅತಿದುಷ್ಟೆಯೂ ಪತಿದ್ವೇಷಿಯೂ ಆದ ಆ ಕರ್ಕಶಿಯು ಶೀಲೆಯನ್ನು ಬಹುವಾಗಿ ಕಾಡುವಳು.

ಹೀಗಿರಲು ಅತಿಸೌಂದರ್ಯವತಿಯೂ ಪ್ರಾಪ್ತವಯಸ್ಕಳೂ ಆಗಿರುವ ಶೀಲೆಯ ವಿವಾಹದ ಕುರಿತು ಸುಮಂತನು ಚಿಂತಿಸುತ್ತಿರಲಾಗಿ ಕೌಂಡಿನ್ಯನೆಂಬ ವೇದಪಾರಂಗತನಾದ ಮುನಿಯು ಮನೆಗೆ ಬರಲು 'ಈತನೇ ತನ್ನ ಸುಪುತ್ರಿಗೆ ತಕ್ಕವನೆಂದು' ನಿರ್ಧರಿಸುವನು. ಕೌಂಡಿನ್ಯ-ಶೀಲೆಯರ ವಿವಾಹವು ಘನವಾಗಿ ಜರುಗಿ ಶೀಲೆಯು ಪತಿಗೃಹಕ್ಕೆ ತೆರಳುವ ಸುಸಮಯದಲ್ಲಿ ಸುಮಂತನು ದುಷ್ಟೆಯಾದ ಚಂಡಿಗೆ "ಉಡುಗೊರೆಯಾಗಿ ಏನಾದರೂ ಕೊಡು" ಎಂದು ಕೇಳಲು ಆಕೆ ಮುನಿಯುವಳು. ಸುಮಂತ ಸಿಹಿಉಂಡೆಯೊಂದನ್ನು ಮಡದಿಗೆ ತಿಳಿಯದಂತೆ ಮಗಳಿಗೆ ಕೊಟ್ಟು ಹರಸಿ ಕಳುಹುವನು.

ದಾರಿಯಲ್ಲಿ ನದಿಯೊಂದನ್ನು ಕಂಡ ಕೌಂಡಿಲ್ಯನು ಸ್ನಾನಕ್ಕೆಂದು ತೆರಳಲು ಅದೇ ನದಿಯಲ್ಲಿ ಅನಂತನವ್ರತವನ್ನಾಚರಿಸುತ್ತಿರುವ ಕೆಲವು ಸ್ತ್ರೀಯರನ್ನು ಕಂಡ ಶೀಲೆಯು ಅದರ ಕುರಿತು ಕೇಳಲಾಗಿ ಅನಂತನವ್ರತದ ಮಹಿಮೆಯನ್ನು ಅರಿತು ತಾನೂ ವ್ರತವನ್ನಾಚರಿಸಿ ತಂದೆಯು ನೀಡಿದ ಉಂಡೆಯನ್ನೇ ನೈವೇದ್ಯವಾಗಿ ಅರ್ಪಿಸುವಳು. ಅಭ್ಯಂಜನಗೊಂಡ ಕೌಂಡಿನ್ಯನು ತನ್ನ ರಥವು ಸ್ವರ್ಣಮಯವಾಗಿ ಬದಲಾಗಿರುವುದನ್ನು ಕಂಡು ಅಚ್ಚರಿಪಟ್ಟು, ಸತಿ ಸಮೇತನಾಗಿ ಗೃಹವನ್ನು ಪ್ರವೇಶಿಸುವನು. ಬಡಕೌಂಡಿಲ್ಯನ ಮನೆಯು ಅರಮನೆಯಂತಾಗಿ, ಸುತ್ತಲೂ ಸೇವಿಸುತ್ತಿರುವ ದಾಸಿಯರಿಂದಲೂ, ಸಕಲೈಶ್ವರ್ಯಗಳಿಂದಲೂ ಕಂಗೊಳಿಸುತ್ತಿರಲಾಗಿ ಚಕಿತನಾಗಿ ಮನದೊಳು ಧ್ಯಾನಿಸಲು ಸಕಲರೀತಿಯಿಂದಲೂ ಸುಲಕ್ಷಣೆಯಾದ ತನ್ನ ಸತಿಯೇ ಇದಕ್ಕೆ ಕಾರಣವೆಂದು ತಿಳಿಯುವನು. ಹೀಗಿರುತ್ತ ಸತಿಯ ಎಡತೋಳಿನಲ್ಲಿರುವ ದಾರವನ್ನು ಕಂಡು ಅದೇನೆಂದು ಕೇಳಲು ಆಕೆಯು ತಾನು ಅನಂತನ ವ್ರತವನ್ನು ಆಚರಿಸಿರುವುದನ್ನು ಹೇಳಲಾಗಿ ನಂಬದ ಕೌಂಡಿನ್ಯನು ಆಕೆಯನ್ನು ಚಂಚಲೆಯೆಂದೂ, ವಂಚಕಿಯೆಂದೂ ಹಳಿದು ಆ ದಾರವನ್ನು ಬೆಂಕಿಗೆ ಹಾಕುವನು. ಶೀಲೆಯು

ಸುಟ್ಟ ದಾರವನ್ನು ಹಾಲಿನಲ್ಲಿಟ್ಟು ರಕ್ಷಿಸಲು ಅವರೀರ್ವರ ಹರಣವುಳಿಯಲಾಗಿ ಸಕಲೈಶ್ವರ್ಯಗಳು ಕ್ಷಣದಲ್ಲಿ ಕರಗುವುದು.

ದಟ್ಟದರಿದ್ರನಾಗಿ ಕೌಂಡಿಲ್ಯನು ಬವಣೆ ಪಡುತ್ತಿರಲು ನಿಜಕಾರಣವೇನೆಂದು ಸತಿಯನ್ನು ಕೇಳಲು ಆಕೆಯು ಅನಂತನವ್ರತ ಮಹಿಮೆಯಿಂದ ಸಕಲೈಶ್ವರ್ಯಗಳನ್ನು ಪಡೆದೆವೆಂದೂ, ದಾರವನ್ನು ಸುಡಲು ಅದು ಮಾಯವಾಯಿತೆಂದೂ ಹೇಳುವಳು. ಪರಿಹಾರಾರ್ಥವಾಗಿ ಆಕೆಯು ತಿಳಿಸಿದಂತೆ ಅನಂತನನ್ನು ಕಾಣುವಾಸೆಯಿಂದ ಹೊರಟ ಆ ಕೌಂಡಿನ್ಯನು ವಿಪಿನದೊಳಗೆ ಕಂಡ ಮರಗಿಡಗಳನ್ನೂ, ಪಶು-ಪಕ್ಷಿಗಳನ್ನೂ, "ಅನಂತನನ್ನು ಕಂಡಿರಾ ?" ಎಂದು ದೈನ್ಯನಾಗಿ ಕೇಳುತ್ತಾ ಕೈ-ಕಾಲು ಸೋತು ಕುಸಿಯುವನು.

ಅಲ್ಲಿಗೆ ಬ್ರಾಹ್ಮಣನೋರ್ವನು ಬಂದು ಅವನನ್ನುಪಚರಿಸಿ ವಿಚಾರಿಸಲು ಅನಂತನ ದರ್ಶನಕ್ಕಾಗಿ ಹಂಬಲಿಸುತ್ತಿರುವೆನೆಂದು ತಿಳಿಸಲು ಆ ವೃದ್ಧನು ಕೌಂಡಿನ್ಯನನ್ನು ಒಂದು ಗುಹೆಯೊಳಗೆ ಕರೆತಂದು ಸಾವಿರ ಪ್ರಭೆಯುಳ್ಳ ವೈಕುಂಠಪತಿಯನ್ನು ತೋರುವನು. ಅತಿಶಯ ಭಕ್ತಿಯಿಂದ ಚರಣಕಮಲಗಳಿಗೆ ಎರಗಿದ ಕೌಂಡಿನ್ಯನು ತಾನು ವಿಪಿನದೊಳಗೆ ಫಲತುಂಬಿದ ಚೂತವೃಕ್ಷ, ಕಂದನಿಗೆ ಹಾಲು ಸುರಿಸದ ಗೋವು, ಒಂದಾಗಿ ಹರಿದ ಎರಡು ನದಿಗಳು, ವೃಷಭನೂ, ಮದಗಜನೂ, ಕತ್ತೆಯೂ, ಕೊನೆಯಲ್ಲಿ ವಿಪ್ರನು ಕಂಡುದುದಕ್ಕೆ ನಿಮಿತ್ತವೇನೆಂದು ಆ ದೇವನನ್ನು ಕೇಳಲು ಆತನ ಗುಣಗಳಾದ ಪರರಿಗೆ ವಿದ್ಯೆ ನೀಡದಿರುವುದು. ಕೆಟ್ಟಭೂಮಿಯನ್ನು ದಾನ ನೀಡುವುದು. ಲೋಭವು, ಅಧರ್ಮವು, ಸಿರಿ ಮದವು ಹಾಗೂ ಅವನಲ್ಲಿರುವ ಕೋಪ, ಇವುಗಳೇ ನಿಮಿತ್ತಗಳೆಂದು ಹೇಳಿ ಆ ವಿಪ್ರನು ಸ್ವತಃ ತಾನೇ ಎಂದು ಅವನ ಸಂಶಯ ನಿವಾರಣೆಗೈದ ವಿಷ್ಣುವು "ಸತಿಯೊಂದಿಗೆ ಅನಂತ ವ್ರತವನ್ನು ಆಚರಿಸಿ ಸುಖದಿಂದ ಬಾಳೆಂದು" ಹರಸುವನು. ಕೌಂಡಿಲ್ಯನು ತನ್ನಾಶ್ರಮಕ್ಕೆ ತೆರಳಿ ಶೀಲೆಯೊಂದಿಗೆ ಶ್ರೀಪತಿಯ ವ್ರತವನ್ನಾಚರಿಸಿ ಸಕಲ ಸೌಭಾಗ್ಯವನ್ನು ಪಡೆದು ಬಾಳಿದನು.

ಶ್ರೀಕೃಷ್ಣನು ಪಾಂಡವರಿಗೆ ಈ ಕಥೆಯನ್ನು ಹೇಳಿ ಅನಂತರ ವ್ರತವನ್ನಾಚರಿಸಿರೆಂದು ತಿಳಿಸಿ ದ್ವಾರಕೆಗೆ ಮರಳುವನು.

ಪಾಂಡವರು ದ್ರೌಪದಿಯೊಡನೆ ಹನ್ನೆರಡು ವರ್ಷಗಳು ನಿಷ್ಠೆಯಿಂದ ವ್ರತವನ್ನು ಆಚರಿಸಿದುದರ ಫಲವಾಗಿ, ಅಜ್ಞಾನವಾಸವನ್ನು ಕಳೆದು ಕೌರವನಲ್ಲಿಗೆ ನಡೆದು, ಸಮರವನ್ನು ಆಹ್ವಾನಿಸಿ, ಮಹಾಜಿರಂಗದೊಳಗೆ ಕೌರವರನ್ನು ಸದೆಬಡಿದು ಹಸ್ತಿನಾವತಿಯ ಪಟ್ಟವನ್ನು ಹೊಂದಿ ಸಕಲ ಸಂಪತ್ತನ್ನು ಗಳಿಸಿ ಸಮೃದ್ಧಿಯಿಂದ ಧರೆಯನ್ನಾಳುವರು.

ಪಾತ್ರಧಾರಿಗಳು

ಧರ್ಮರಾಯ	ಶೀಲೆ
ಶ್ರೀಕೃಷ್ಣ	ಚಂಡಿ
ಋಷಿಗಳು	ಕೌಂಡಿನ್ಯ
ದ್ರೌಪದಿ	ಸ್ತ್ರೀಯರು
ಸುಮಂತ	ಬ್ರಾಹ್ಮಣರು
ಅನಂತ	

ಶ್ರೀಮದನಂತರಶಯನಾಯ ನಮಃ

ಶ್ರೀಮದ್ಭವಿಷ್ಯೋತ್ತರದೊಳಗಣ ಯಕ್ಷಗಾನ

ಅನಂತನವ್ರತ ಮಹಾತ್ಮೆ

ಕಂದ ಪದ್ಯ

ಶ್ರೀಮದನಂತಮುದಾರಂ, ಕಾಮಪ್ರದ ಕರುಣಾಂಭೋ ನಿಧಿ ಕಮನೀಯಂ. ಸಾಮಜಪತಿ ಪಾಲಿತ ಬಹು, ಕ್ಷೇಮವ ನತಿಕೃಪೆಯಿಂದೆಮಗೀವುದು ಸತತಂ ॥ ೧ ॥

ವಾರ್ಧಿಕ್ಯ

ಅಂತರಹಿತ ಶ್ರೀಯನಂತ ನಿಶ್ಚಿಂತನಂ । ಚಿಂತಿತಾರ್ಥ ಪ್ರದ ಕಲಾಪ ಚಿದ್ರೂಪನಂ । ಕುಂತೀತನೂದ್ಭವಸುರಕ್ಷ ಕಮಲಾಕ್ಷನಂ ದೇವದೇವಾಧೀಶನಂ ॥ ಕಂತುಶತಕೋಟಿ-ಲಾವಣ್ಯಾಗ್ರಗಣ್ಯನಂ । ತಂತ್ರಮೂರುತಿ ರಮಾಕಾಂತ ಭಗವಂತನಂ । ಸಂತತಂ ಗುರು ವೆಂಕಟೇಶ ಸರ್ವೇಶನಂ ಧ್ಯಾನಿಪೇಂ ಮಾನಸದೊಳೂ ॥ ೧ ॥ ೨ ॥

ಅರ್ತಿಯಿಂದಾಲಿಸುವದಖಿಳ ಬುಧಜನರು ಭವಿ ಷ್ಯೋತ್ತರ ಪುರಾಣದೊಳ್ ಪೇಳ್ದನಂತನ ಕಥೆಯ । ವಿಸ್ತರಿಪೆ ಯಕ್ಷಗಾನದಲಿ ಸುಲಲಿತ ನುಡಿಗಳಿಂದ ಕನ್ನಡಭಾಷ್ಯದೀ ॥ ಚಿತ್ತ ಶುದ್ಧದಿ ಶ್ರವಣಗೈದ ಸಜ್ಜನರಿಂಗೆ । ಪುತ್ರ ಪೌತ್ರ ಕಳತ್ರ ಸಕಲೇಷ್ಟಭಾಗ್ಯ ಸಂ । ಪತ್ತು ಸಂವೃದ್ಧಿಯಂ ಕರುಣಿಪಂ ಶ್ರೀಕೃಷ್ಣ ನಿತ್ಯಸುಖ ಸಂಪೂರ್ಣನೂ ॥ ೨ ॥ ೪ ॥

ರಾಗ ನಾಟ ಜ ಝಂಪೆ ತಾಳ

ಅನವರತ ನೆನವೆ ಮ । ನ್ಮನದಿ ಶ್ರೀಮದನಂತೇ । ಶನೆ ನಿನ್ನ ದಿವ್ಯಪದ । ವನಜಗಳ ಬಿಡದೇ ॥ ಅನವರತ ॥ ಪಲ್ಲ । ಶಿವಕರಾಚ್ಯುತ ನಿತ್ಯ । ಶಿವ ಪೂರ್ಣ ಸರ್ವೇಶ । ಶಿವ ಜಾತ ಸಂಭೂತ । ಶಿವ ಮುಖ್ಯಸೇವ್ಯಾ ॥ ಶಿವ ಯಾನಪಿತ ಯಮಳ । ಶಿವ ಭಂಜನಾನಂದ । ಶಿವ ಮಥನ ಗೋವಿಂದ । ಶಿವಕರ ಮುಕುಂದಾ ॥ ಅನವರತ ॥ ೧ ॥ ಗುರುಪೂಜ್ಯನೆಂದೊಲಿದು । ಗುರು ದಕ್ಷಿಣೆಗೆ ಮಣಿದ । ಗುರುಸುತನ ತಂದಿತ್ತು । ಗುರುವಿಗೊಂದಿಸಿದಾ । ಗುರುವಿಂಗೆ ಗುರುಜಗ । ದ್ಗುರು ಸಾರ್ವಭೌಮ ಚಿ । ದ್ಗುರುಮೂಲಿಕಾವಾಸ । ಗುರುವೆಂಕಟೇಶಾ ॥ ಅನವರತ ॥ ೨ ॥ ೬ ॥

ವಾರ್ಧಿಕ್ಯ

ಶ್ರೀರಮಣನಂಘ್ರಿಯಂ ಭಜಿಸಿ ಶಿರಿಯಂ ಸ್ಮರಿಸಿ ಸಾರಸಾಸನ ಸರಸ್ವತಿ ಶಂಭು ಗುಹ ಗಣಪ ಗೌರಿ ವೇದವ್ಯಾಸ ವಾಲ್ಮೀಕಿ ಶುಕ ಸೂತರಿಂದ ಮತಿಯಂ ಯಾಚಿಸೀ ॥ ನಾರದಾದ್ಯಖಿಳ ಮುನಿಗಳಿಗೆರಗಿ ಭಕ್ತಿಯಿಂ ॥ ದೋರಂತೆ ದಿಕ್ಪಾಲರಂ ನೆನೆದು ಹರುಷದಿಂ ॥ ಧಾರುಣಿಯೊಳಿರುವ ಕವಿಜನರ ಬಲಗೊಂಡೊರೆವೆನೀ ಮಹಾ ಸತ್ಕಥೆಯನೂ ॥ ೧ ॥ ೭ ॥

Scanned by CamScanner

ದ್ವಿಪದಿ

ಶ್ರೀ ಮಹಾಭಾರತ ಪುರಾಣ ಕಥನದಲೀ । ರೋಮ ಹರ್ಷಣಿ ಪೇಳುತಿರೆ ವಿಸ್ತರದಲೀ ॥ ೧ ॥ ಲಾಲಿಸುತ ಶೌನಕಾದ್ಯಖಿಳ ಮುನಿವರರೂ । ತಾಳಿ ಹರುಷನ ಸೂತನೊಡನೆ ಕೇಳಿದರೂ ॥ ೨ ॥ ಚಿಂತಿತಾರ್ಥಪ್ರದಾನಂತನ ವ್ರತವನೂ । ಎಂತಾಚರಿಸುವದಿದರಾದ್ಯಂತಗಳನೂ ॥ ೩ ॥ ಕರುಣದಿಂದೆನಗೆ ವಿಸ್ತರಿಸಬೇಕೆನುತಾ । ಮೆರವ ಭಕ್ತಿಯಲಿ ಕೇಳಿದರು ಮನ್ನಿಸುತಾ ॥ ೪ ॥ ಆದಿಯೊಳಗ್ಯಾರು ರಚಿಸಿದರೀ ವ್ರತವನೂ । ಮೇದಿನಿಯೊಳಪ್ಪ ಸಾಫಲ್ಯಗಳದೇನೂ ॥ ೫ ॥ ಅಖಿಳ ವೃತ್ತಾಂತವಷಿವಿಸ್ತಾರದಿಂದಾ । ಪ್ರಕಟಿಸೆಮಗೆನುತ ಶೌನಕ ಕೇಳಲಂದಾ ॥ ೬ ॥ ಋಷಿವರರ ನುಡಿಯ ಲಾಲಿಸುತ ಕೇಳಿದನೂ । ಅಸುರಾರಿ ಪದವ ಧ್ಯಾನಿಸುತಲುಸುರಿದನೂ ॥ ೭ ॥ ೧೪ ॥

ರಾಗ ಮಧ್ಯಮಾವತಿ ಜ ತ್ರಿವುಡೆತಾಳ

ಚಿತ್ತವಿಸಿ ಮುನಿಗಳಿರನಂತನ ॥ ವೃತ್ತದಾಗಮ ಸಫಲವಾ ॥. ಬಿತ್ತರಿಪೆ ಶ್ರೀಕೃಷ್ಣ ಕುಂತೀ। ಪುತ್ರಗರುಹಿದ ಕಥನವಾ ॥ ವಿವರವಾಗೀ ॥ ೧ ॥ ಮುನಿಪ ಕೇಳ್ಪಾಂಡವರ ಸೋಲಿಸಿ । ವನಕೆ ಕಳುಹೆ ಸುಯೋಧನಾ ॥ ವನಜಲೋಚನ ಬಂದು ಕಾಮ್ಯಕ । ವನದಿ ಪೇಳ್ದನನಂತನಾ ॥ ಕಥೆಯ ಮುದದೀ ॥ ೨ ॥ ಕಂತುಪಿತ ವಿಸ್ತರಿಸಿ ಪೇಳ್ದನ । ನಂತವ್ರತದಾಗಮವನೂ ॥ ಎಂತೆನಲು ಪಾಂಡವರ ಪೂರ್ವ ಕ । ಥಾಂತರದ ಸರಿಗತಿಯನೂ ॥ ಪೇಳ್ವೆ ನಿಮಗೇ ॥ ೩ ॥ ೧೭ ॥

ವಾರ್ಧಿಕ್ಯ

ಮಿಥ್ಯವಹ ಸಕಲ ಸಾಮ್ರಾಜ್ಯಮಂ ಕೌರವರಿ । ಗಿತ್ತು ಸ್ವೈರಣೆ ತಪ್ಪದೇಕ ದೃಢಕರದ ನಿಜ। ಸತ್ಯ ಸಾಮ್ರಾಜ್ಯವಂ ಬಿಡದೆ ಸಹಜಾತರಂ ಪುತ್ರ ಪೌತ್ರ ಕಳತ್ರರಂ ॥ ದೊತ್ತಿನಿಂದೊ ಡಗೂಡಿ ನಡದ ನಡವಿಂಗೇಕ । ಛತ್ರಪತಿಗಿಂತಾದುದಕಟೆನ್ನುತಾಗ ಮುನಿ । ಪೋತ್ತಮರ್ಕಾಮ್ಯಕ ಮಹಾವನಕೆ ಕರೆದೊಯ್ಯಲರ್ತಿಯಿಂದಿರುತಿರ್ದರೂ ॥ ೧ ॥ ೧೮ ॥

ಮಿತ್ರನಂ ಪ್ರಾರ್ಥಿಸಲ್ಕೊಲಿದಿತ್ತನಕ್ಷಯದ । ಪಾತ್ರೆಯನ್ನಮೃತಾನ್ನ ಭೋಜನದಿ ನೆರೆದ ದ್ವಿ । ಜೋತ್ತಮರ ಸಂತುಷ್ಟಿ ಗೈದರನುದಿನದೊಳು ಯದೂತ್ತಮನ್ನೊಲಿದವರ್ಗೇ । ಎತ್ತಣದು ಕೇಡು ಬಳಿಕೊಂದು ದಿನ ದ್ವಾರಕೆಯೊ । ಳಿತ್ತ ಚರರಿಂದ ವಾರ್ತೆಯ ಕೇಳಿ ಶ್ರೀಕೃಷ್ಣ । ನುತ್ತಮರ ಕಾಣಬೇಕೆನುತಲೈತಂದನಂದತ್ಯಧಿಕ ಕರುಣದಿಂದಾ ॥ ೨ ॥ ೨೦ ॥

ರಾಗ ಭೈರವಿ ಝುಂಪೆತಾಳ

ಕೇಳು ಶೌನಕ ಲಕ್ಷ್ಮಿ । ಲೋಲನೀ ವಾರ್ತೆಯನು । ಲಾಲಿಸುತ್ತಲಿ ದುಗುಡ । ತಾಳಿದನು ಮನದೀ ॥ ೧ ॥ ಕಪಟ ದ್ಯೂತಗಳಿಂದ । ಲಪಹರಿಸಿ ಧರೆಯ ನಿ । ಷ್ಕಪಟಿಗಳನಾರಣ್ಯ । ರಪಣ ಕಟ್ಟಿದರೇ ॥ ೨ ॥ ಅಕಟಕಟ ಧರ್ಮಜ । ನಕುಟಿಲದ ಸತ್ಯದಿಂ ಯುಕುತವಾಯಿತೆ ಬನದ । ಸುಖವಾಸವಿನಿತೂ ॥ ೩ ॥ ತಟ್ಟದಿರದೀ ಪಾಪ । ದುಷ್ಟ ಕೌರವ ಮುಂದೆ । ಕೆಟ್ಟನಲ್ಲದೆ

ಹಗೆಯ । ಬಿಟ್ಟನೆನಲುಂಟೇ ॥ ೪ ॥ ನಮ್ಮಯ ಸಹಾಯಗಳು । ಧರ್ಮಜಂಗಿಹುದೆಂಬ । ವರ್ಮದಿಂ ಜೂಜೆಸಗಿ । ದುರ್ಮತಿ ಕೆಡಿಸಿದಾ ॥ ೫ ॥ ಸಜ್ಜನರ ಸಾಹಿತ್ಯ । ಕಜ್ಜವೆನ್ನದು ಸಹಜ । ದುರ್ಜನರಿಗೆನಗಹಿತ । ರುಜುಜಗವಿದಿಲ್ಲಾ ॥ ೬ ॥ ಎಂದೆನುತ ಸೇವಕರ । ಸಂದೋಹದೊಡನಾಗ । ಬಂದ ಕಾಮ್ಯಕ ವನಕೆ । ನಂದನಂದನನೂ ॥ ೭ ॥ ೨೭ ॥

ರಾಗ ಸಾರಂಗ ಆದಿತಾಳ

ಬಂದಾ । ಶ್ರೀಕೃಷ್ಣ ಮುದ । ದಿಂದಾ । ಕಾಮ್ಯಕ ವನ । ಕೆಂದೂ । ಕರುಣಾ । ಸಿಂಧೂ ॥ ಪಲ್ಲ ॥ ಮಂದರಧರ ಗೋ । ವಿಂದನು ಕುಂತೀ । ನಂದನರನು ಕಾಂ । ಬೊಂದರ್ತಿಗೆ ಮನಸಂದು ಸೇವಕ ಜನ । ವೃಂದದುತ್ಸಹದೀ ॥ ಬಂದಾ ॥ ಅನುಪಲ್ಲ ॥ ಹರಿಯ ಬರವ ಕೇಳೀ । ಧರ್ಮಜ । ಹರುಷವ ಮನದಿ ತಾಳೀ । ವರ ಮುನಿಗಳು ಸಹಿತಾ । ನೆರದ ಭೂ । ಸುರರನು ವಡಗೊಳ್ಳುತಾ ॥ ಭರದಿಂದೆದ್ದರಿದಿರುಗೊಂಬರೆ ಸೋ । ದರ ಸಮ್ಮೇಳದಿ ಬರುತಚ್ಚುತನ ಶ್ರೀ । ಚರಣಕೆ ತಲೆವಾಗುತ್ತಿರೆ ಕಾಣುತ । ಮುರಹರ ತೊಲಗುತ್ತರಸನನಪ್ಪುತ ॥ ಬಂದಾ ॥ ೧ ॥ ಪಾವಮಾನಿಯರ್ಜುನರೂ । ನಕುಲ ಸಹ । ದೇವಾದಿಗಳೆಲ್ಲರೂ । ಪಾವನಾಂಘ್ರಿಗೆ ಮಣಿಯೇ । ನೆಗಹಿದ । ಶ್ರೀವರ ಕೈದಣಿಯೇ ॥ ಭಾವದೊಳೊಪ್ಪುತ ನುಡಿದನುನೊಂದಿರಿ । ಭೂವರನತಿ ಸತ್ಯದಲತೆ ನಿಮ್ಮುವ । ನೀ ವಿಪಿನಕ್ಕೆಳದುದು ಚಿಂತಿಸದಿರಿ । ಕೋವಿದ ಸತ್ಯವೆ ಕಾವುದೆಂದೆನುತಾ॥ ಬಂದಾ ॥ ೨ ॥ ಅರಸನ ಕರ ಹಿಡಿದು । ಭೀಮಾರ್ಜು । ನರ ಹತ್ತಿರೆ ಕರದೂ । ಮೆರೆವ ವನವ ಪೊಗುತಾ । ಪರ್ಣಮಂ । ದಿರವ ನೋಡುತ ಕುಳಿತಾ ॥ ದುರುಳರ ಕಪಟಗಳಿಂದಾರಣ್ಯದ । ಸಿರಿ ನಿಮಗ್ಯಾತಿನ್ನಕಟಕಟೀ ನೃಪ । ನರಿತವರ ವರವಾಯಕಕೊಳಗಾಗುವ । ಮರುಳುತನಕ್ಕೇನೆಂಬೆ ನೆಂದೆನುತಾ ॥ ೩ ॥ ೩೦ ॥

ರಾಗ ಸಾಂಗತ್ಯ ರೂಪಕತಾಳ

ಆ ಸಮಯದಿ ಋಷಿವರರಚ್ಯುತನ ಕಂಡು । ಘೋಷಿಸುತಲೆ ಸ್ತುತಿಸಿದರೂ ॥ ಕೇಶವ ಕೃಷ್ಣ ದಾಮೋದರ ಹರಿ ವಿಷ್ಣು । ವಾಸುದೇವನೆ ನಮೋಯೆನುತಾ ॥ ೧ ॥ ಭಕತ ವತ್ಸಲ ನೀನೆಂಬುದನು ಕಂಡೆವು ನಿನ್ನ । ಭಕತರಿಲ್ಲೀರ್ದ ಕಾರಣದೀ ॥ ಭಕತರ ಕಾಮಧೇನುವ ಕಂಡೆ ತವ ಪಾದ । ಭಕುತಿಯ ಕರುಣಿಸೊ ನಮಗೇ ॥ ೨ ॥ ಸಾಧುಸಂಸರ್ಗವೆ ಇಹ ಪರಗತಿ ಸರ್ವ । ಸಾಧನವೆಂಬ ಸ್ಮೃತಿಯನೂ ॥ ಸಾಧಿಸಿದೆವು ಯಿಂದು ಸಾಧು ರಕ್ಷಕ ತವ । ಪಾದದರ್ಶನವೆಮಗ್ಯಾತೂ ॥ ೩ ॥ ಅಲ್ಲದಿದ್ದರೆ ಶ್ರುತಿತತಿಗೊದಗದ ಪಾದ । ಪಲ್ಲವದ್ವಿತೀಯ ದರ್ಶನವೂ ॥ ಎಲ್ಲಪ್ಪುದೀ ಮಾಂಸಾಕ್ಷಿಗಳಿಂಗೆ ವಿಧಿಭವ । ದುರ್ಲಭವಹ ದಿವ್ಯಾಕೃತಿಯಾ ದರ್ಶನವೂ ॥ ೪ ॥ ಬಲು ದಿನ ಕೃತ ತಪೋಫಲ ವಿಂದಿಗೆಮಗೀಗ । ಫಲಿಸಿತು ಭವದಬಂಧನವೂ ॥ ಗೆಲಿದೆವಿನ್ನಾ ಮುಕ್ತಿ ಸುಲಭವು ತ್ರೈಲೋಕ । ದೊಳಗೆಮಗ್ಯಾರಿನ್ನು ಸರಿಯೂ ॥ ೫ ॥ ೩೫ ॥

ರಾಗ ಶಂಕರಾಭರಣ ತ್ರಿವುಡೆತಾಳ

ಮುನಿಗಳಿರ ಹೃದನಜದೊಳಗನು । ದಿನದೊಳೆನ್ನಾ ನೆನವಿರೀ । ನೆನವ ಭಕತರ ಮನವೆ

Scanned by CamScanner

ಮನೆ ಯೆನ । ಗನುದಿನದಲೀ ॥ ೧ ॥ ಅಖಿಳ ಭುವನಾಧೀಶನೆಂದೇ । ಪ್ರಕಟಗೈದೀರೆನ್ನನೂ ॥ ಸಕಲರೆಲ್ಲರು ಭಜಿಸಿರನುದಿನ । ಯುಕುತವಾಗೀ ॥ ೨ ॥ ಇಲ್ಲ ಸತಿಸುತರಲ್ಲಿ ಸ್ನೇಹಗ । ಳಲ್ಲಿ ಸುಖವು ದೋರದೂ ॥ ನಿಲ್ಲದನುದಿನ ನೆನವ ಸುಜನರಿ । ದ್ದಲ್ಲಿರುವೆನೂ ॥ ೩ ॥ ನಿಮ್ಮ ಬೋಧೆಯೊಳೆನ್ನುವನು ಪರ । ಬೊಮ್ಮನೆಂದೇ ತಿಳಿವಿರೀ ॥ ನಿಮ್ಮ ಬಲದಿಂದಾನು ಮೆರದಿಹೆ । ನಿರ್ಮಲದಲ್ಲೀ ॥ ೪ ॥ ಎನುತಲಾ ಮುನಿ ಜನರ ಮನ್ನಿಸು । ವನಿತ ರೊಳಗಾ ದ್ರುಪದನಾ ॥ ತನುಜೆ ಹರಿಪದವನಜ ದರ್ಶನ । ಕೆನುತ ಬರಲೂ ॥ ೫ ॥ ೪೦ ॥

ವಾರ್ಧಿಕ್ಯ

ಅರುಣರುಚಿನಿಭಯುಗಳ ಚರಣ ದೇವಕಿದೇವಿ । ತರುಣ ಬಕವತ್ಸ ಸಂಹರಣ ಗೋವರ್ಧನೋ । ದ್ಧರಣ ಗೋವಿಂದ ಶುಭಕರಣ ಮಂಜುಳ ಧುರಿಣ ಶರಣ ಭವರಕ್ಷರಕ್ಷಾ ॥ ಮರಣ ಜನನಾದಿ ದುಸ್ತರಣ ಭವದೂರ ನಿಜ । ಶರಣಾಗತರ ಪೊರವ ಕರುಣಾಂಬುನಿಧಿ ನತೋ । ದ್ಧರಣ ಪೀತಾಂಬರಾ ವರಣ ಜಯಜಯವೆಂದು ಚರಣಕೆರಗಿದಳು ಬಂದೂ ॥ ೧ ॥

ತುಂಬಿ ತುಳುಕುತ್ತಿರುವ ಕಂಬನಿಗಳಂ ಶ್ರೀಪ । ದಾಂಬು ಜವ ತೊಳೆದು ಬಿಡಲಂಬಕಗಳಿಂದಿಳಿಯು । ವಂಬುವಂ ನ್ನೊರಸುತ ಕರಾಂಬುಜವ ಮುರಿದೇಳುತಂಬುಜಾನನೆ ಧೈರ್ಯದೀ ॥ ಅಂಬುಜಾಸನನ ಪಿತನಂಬುಜಾಲಯೆರಮಣ । ನಂಬುಜಾಂ ಬಕನಕ್ಷಯಾಂಬರವನಿತ್ತ ಕರುಣಾಂಬುನಿಧಿ ಭಕ್ತರ ಕುಟುಂಬಿ ನೀನೆಂಬ ಬಿರಿದಂ ಬಲಿದೆಯೆಂದಳಾಗಾ ॥ ೨ ॥ ೪೨ ॥

ರಾಗ ಸುರುಟಿ ಅಷ್ಟತಾಳ

ರಕ್ಷಿಸಿದೆ ಯೆನ್ನನೂ । ಶ್ರೀಹರಿಯೇ । ರಕ್ಷಿಸಿದೆ ಯೆನ್ನನೂ ॥ ಪಲ್ಲ ॥ ರಕ್ಷಿಸಿದೇ ಯೆನ್ನ । ಪಕ್ಷಿಯಾನಾ ದೀನ । ಪಕ್ಷ ಸರ್ವಲೋಕಾ । ಧ್ಯಕ್ಷಬುಜಾಕ್ಷಾ ॥ ರಕ್ಷಿಸಿದೆ ॥ ಅನು ಪಲ್ಲ ॥ ದುರುಳನೆನ್ನಯ ಸಿರಿ । ತುರುಬನು ಹಿಡಿದೆಳ । ತರುತೋಲಗದಿ ನಿಂದಿರಿಸಿದಾ ॥ ಒರವೆನ್ಯಾರಿಗೆ ನಾನೆ । ನ್ನರಸರ್ಯೆವರು ಕಾಣು । ತಿರೆ ದೈತ್ಯ ನುಡಿಸಿದ । ನೆರೆದ ಸಭೆಯಲೀ ॥ ರಕ್ಷಿಸಿದೆ ॥ ೧ ॥ ಒಡೆಯರ್ರೈವರನ್ನು । ಬಿಡುವದೀಗೆನಲೆನ್ನ । ತೊಡೆಯಾ ನೀಕ್ಷಿಸೆನುತೆಂದಾ ॥ ತೊಡೆಯ ಮೇಲೆ ಭೀಮ । ಹೊಡೆಯಲಿ ಗದೆ ಯಿಂದಿ । ಕ್ಕಡಿ ಗೈಯಲೆನಲು ಭೋರ್ಗುಡಿಸಿದ ಖಳನೂ ॥ ರಕ್ಷಿಸಿದೆ ॥ ೨ ॥ ದಿಟ್ಟೆ ಹೆಂಗುಸಿವ । ಳುಟ್ಟ ಸೀರೆ ಸುಲಿ । ದಿಟ್ಟು ಭಂಗಿಸೆಂದೆನುತಿರೇ ॥ ದುಷ್ಟ ದುಶ್ಯಾಸನ । ಮುಟ್ಟಿ ಸೆಳೆಯೆ ಕೃಷ್ಣ । ಕೃಷ್ಣಾ ಯೆನುತ್ತ ಕೂ । ಗಿಟ್ಟು ಕರೆಯಲೂ ॥ ರಕ್ಷಿಸಿದೆ ॥ ೩ ॥ ಅನಾಥ ಬಂಧುವೆ । ದೀನರಕ್ಷಕ ಸನ್ಮ । ಹಾನುಭಾವ ಸುಪ್ರೇಮೀ । ಶ್ರೀನಿವಾಸ ಕೃಷ್ಣ । ನೀನೇನ ಗತಿಯೆಂದು । ನಾನು ಕರೆಯಲಭಿ । ಮಾನವ ಕ್ಯಾದೇ ॥ ರಕ್ಷಿಸಿದೆ ॥ ೪ ॥ ರಕ್ಷಿಸು ಕೃಷ್ಣ ನೀ ॥ ರಕ್ಷಿಸದಿರೆ ಬೇರೆ । ರಕ್ಷಕರಿಲ್ಲೆಂದೊದರಲೂ ॥ ಅಕ್ಷಯಾತ್ಮಕನೆ ನೀ । ನಕ್ಷಯಾಂಬರವಿತ್ತು । ರಕ್ಷಿಸಿದೆಯೊ ಲೋಕಾಧ್ಯಕ್ಷ ಕಂಜಾಕ್ಷಾ । ರಕ್ಷಿಸಿದೆ ॥ ೫ ॥ ೪೭ ॥

ರಾಗ ಕಾಂಭೋದಿ ಏಕತಾಳ

ದುಷ್ಟ ದುಶ್ಯಾಸನನ ರಣದಿ । ಕುಟ್ಟಿ ರಕುತವನೂ । ಇಟ್ಟು ತಲೆಗಾಗಿ ತುರುಬ । ಕಟ್ಟುವೆನೆಂದನೂ ॥ ಕೊಟ್ಟ ಭಾಷೆಯ ಪೂರೈಸಿ । ಕೊಟ್ಟು ರಕ್ಷಿಸುವಾ । ಇಷ್ಟದೈವ ನೀನೆ ನಮ್ಮ । ಭೀಷ್ಟವ ಪಾಲಿಸುವಾ ॥ ೧ ॥ ನೀಚನಾ ದಂತ ಪಜ್ತಿಯ ॥ ಬಾಚಣಿಕ ಗೈದೂ । ಬಾಚಿ ತಲೆಯ ತೋರಕರುಳಿ । ನಾ ಚೆಲ್ವ ಸುಮ ತೆಗೆದೂ ॥ ನಾ ಚಂದದಿ ಮುಡಿವೆ ಜನರ । ಗೋಚರದೊಳೆಂದೂ । ವಾಚಿಸಿದೆ ದೇವ ಕೇಳ್ನಿ । ನ್ನಾ ಚೇತನ ದೊಳಿಂದೂ ॥ ೨ ॥ ತಂಗಿ ಕೇಳೆ ನಿನ್ನ ಮಾನ । ಭಂಗಿಸಿದ ಖಳರೂ ॥ ಭಂಗ ಬಡುವರು ಕೇಳು ಯು । ದ್ಧಾಂಗಣದೊಳವರೂ ॥ ತುಂಗತರದ ಕುಹಕ ಕಪ । ಟಂಗಳಿಂದ ನಿಮ್ಮಾ । ಭಂಗಿಸಿದ ದಾನವರನು । ನುಂಗದಿರದಮ್ಮಾ ॥ ೩ ॥ ಇಳೆಗೆ ಸುಚರಿತ್ರೆ ನಿನ್ನ । ಬಳಲಿಸಿದಂತಳಲೂ । ಮುಳುಗಿಸುವದು ಕೌರವರ । ಬಳಗವನ್ನು ಕೇಳೂ । ನಳಿನನೇತ್ರೆ ನಿನ್ನ ಭಾಷೆ । ಗಳನು ಪೂರವಿಸುವೇ । ಅಳುಕಬೇಡಿನ್ನವಧಿಯಂತ್ಯ । ದೊಳಗೆ ತೋರಿಕೊಡುವೇ ॥ ೪ ॥ ಎನುತ ತಾನು ತಂದ ವಸ್ತ್ರ । ಕನಕಾಭರಣಗಳನೂ । ವನಿತೆ ದ್ರುಪದ ತನುಜೆ ಕುಂತಿ । ತನಯರಿಗುಡಿಸಿದನೂ ॥ ಜನಪ ಭೀಮಾರ್ಜುನ ಯಮಳ । ರನು ಹತ್ತಿರ ಕರೆದೂ । ದನುಜ ವೈರಿ ನುಡಿದನೊಂದು । ಘನ ಪ್ರಶ್ನೆಯನೊಲಿದೂ ॥ ೫ ॥ ೫೨ ॥

ರಾಗ ಭೈರವಿ ಅಷ್ಟತಾಳ

ಕೇಳಿರೆಲ್ಲವರೆನ್ನಯಾ । ಮಾತನು ಚಿಂತೆ । ತಾಳಲಿನ್ಯಾತಕಯ್ಯಾ ॥ ಕೋಳು ಹೋದಿರಿ ನಿಮ್ಮ ಸತ್ಯದಿ ರಾಜ್ಯವ । ಖೂಳಗಿತ್ತಿರಿ ಸಿರಿಯಾ ॥ ೧ ॥ ಕ್ಷಿತಿಪ ಚಿಂತಿಸಲು ಬೇಡಾ ಅನಂತನ ವ್ರತವನು ಮಾಡು ಗಾಢಾ ॥ ಜತೆಯಗಲಿದ ಸಿರಿ ಸಾಮ್ರಾಜ್ಯವೊಂದಕ್ಕೆ । ಶತವಾಗಿ ಬಹುದು ನೋಡಾ ॥ ೨ ॥ ಇರುವದಮಿತ ವ್ರತವೂ । ಅದರೊಳ್ಸುರ । ತರು ಕಣ ಯೀ ವ್ರತವೂ ॥ ಸಿರಿ ಸಂಪತ್ತಿನೊಳಿಟ್ಟೆಯುಳ್ಳವರೆಸಗಲು । ಭರಿತವಪ್ಪುದು ಭಾಗ್ಯವೂ ॥ ೩ ॥ ಇಹದೊಳ ಗೈಶ್ವರ್ಯವೂ । ಪರದಿ ಮುಕ್ತಿ । ಯಹುದು ಕೇಳ್ ನಿಶ್ಚಯವೂ ॥ ಬಹು ಸಂಪತ್ತಿನೊಳಿಚ್ಚೆ ಯುಳ್ಳವರೆಸಗಲು । ಬಹುದಮಿತೈಶ್ವರ್ಯವೂ ॥ ೪ ॥ ಮೆರೆವ ವಿಧ್ಯುಕ್ತದಿಂದಾ । ಆಚರಿಪುದು । ವರುಷ ವರುಷಕೆಯೊಂದಾ ॥ ಭರಿತದನಂತನೆ ಪರಮ ಪುರುಷ ರಮಾ । ವರ ಗತಿ ಭಕ್ತಿಯಿಂದಾ ॥ ೫ ॥ ಚಿತ್ತದಿ ಸುತ್ತಿರು ಪ್ರತಿವರ್ಷವೂ ॥ ಸತ್ಯವೆನ್ನಯ ವಾಕ್ಯವೂ । ತಪ್ಪದೆ ಸಾಧಿ । ಸುತ್ತಿರು ಪ್ರತಿವರ್ಷವೂ ॥ ಚಿತ್ತದಿ ನೆನೆದಿಷ್ಟವಹುದು ಶಾಶ್ವತದಿಂದ । ಶತ್ರುಪರಾಜಯವೂ ॥ ೬ ॥ ದುಃಖವೆಲ್ಲವ ಕಳದೂ । ಸೌಖ್ಯವೈ ಶಾಶ್ವತ ಸಿರಿ । ಯಕ್ಕು ಸಂತಸ ತಳೆದೂ ॥ ಮಿಕ್ಕವ್ರತಗಳಂತಲ್ಲಿದು ಕಾಮಧೇನುವು । ಕೇಳ್ತಿಳಿದೂ ॥ ೭ ॥ ೫೯ ॥

ಕಂದಪದ್ಯ

ಶ್ರೀಪತಿಯಿಂತೆನೆ ಕೇಳ್ದಾ । ಭೂಪತಿ ಚಿತ್ತದೊಳು ಹರುಷ ತಾಳುತ್ತಾಗಂ ॥ ಆ ಪರಮ ವ್ರತಕಾಗುವ । ಸೋಪಸ್ಕಾರಗಳ ಕೇಳ್ದ ಮುರಹರನೊಡನಂ ॥ ೧ ॥ ೬೦ ॥

ರಾಗ ಭೈರವಿ ಝುಂಪೆತಾಳ

ದೇವ ಕೇಳೀ ವ್ರತವ । ನಾವ ದಿನಕಾಚರಿಪು । ದಾವ ವಿಧಿಯೆಂಬುದನು । ಶ್ರೀವರನೆ

ಪೇಳೊ ॥ ೧ ॥ ಎಂತಾಚರಿಪುದಿದಕ । ಹಂತದ್ರವ್ಯಗಳೇನು । ಪಿಂತಾರು ರಚಿಸಿದರ । ನಂತನ
ವ್ರತವಾ ॥ ೨ ॥ ದ್ವಿಜರೆನಿಬರದಕೆ ಋ । ತ್ವಿಜರ ಬರಿಸಲು ಬೇಕು । ನಿಜವ್ರತಗಳೆಷ್ಟು ದಿನ ।
ರುಜುಗೈಯಬೇಕೊ ॥ ೩ ॥ ವಿವರಿಸುವದೆನಗಿದರ । ವಿವರವನು ದೇವ ಕೇ । ಳವನಿಯೊಳಗತಿ
ಸೌಖ್ಯ । ನಿವಹ ಸಾಧನವಾ ॥ ೪ ॥ ಎಂದೆನುತ ಭೂಪ ಮುದ । ದಿಂದ ಕೇಳಲು ಕರುಣ ।
ದಿಂದುಸುರುತಿರ್ದ ಗೋ । ವಿಂದನತಿ ಹಿತದೀ ॥ ೫ ॥ ೬೫ ॥

ರಾಗ ಕೇತಾರಗೌಳ ಜ ಝಂಪೆತಾಳ

ವಿದಿತವನು ಲಾಲಿಸರಸಾ । ಸಿತ ಭಾದ್ರ । ಪದ ಚತುರ್ದಶಿಯ ದಿವಸಾ । ಉದಯ
ಮಧ್ಯಾಹ್ನದೊಳಗೇ । ಶುಭ ಲಗ್ನ । ದುದಯವಾಗಿಹ ಗಳಿಗೆಗೇ ॥ ೧ ॥ ದೇವ ಬ್ರಾಹ್ಮಣರ
ಮೇಳದೀ । ಸಕಲ ವಿಭ । ವಾಳಿಯ ಸನ್ನಹದೀ ॥ ದೇವನದಿತಟಕೆ ಪೋಗೀ । ಸ್ನಾನ ಸ । ದ್ಭಾವ
ಶುಚಿರ್ಭೂತರಾಗೀ ॥ ೨ ॥ ಚೆಲುವ ಮಂಟಪದ ರಚಿಸೀ ॥ ಗೋಮಯದಿ । ಸ್ಥಳವ ಶುದ್ಧದಿ
ಸಾರಸೀ ॥ ಒಳಗಷ್ಟದಳ ಪದ್ಮವಾ । ಬರೆವುತನು । ಗೊಳಿಸುವದು ಪರಿವರ್ಣವಾ ॥ ೩ ॥ ಗದೆ
ಶಂಖ ಚಕ್ರ ಪದ್ಮಾ । ಸ್ವಸ್ತಿಕೆಯು । ಸದಮಲದಿ ರಚಿಸಿ ಸದ್ಮಾ ॥ ಮುದದಿ ಚಂದನ ಗಂಧದೀ ।
ಕುಂಕುಮದಿ । ವಿಧಿಸುವದಲಂಕಾರದೀ ॥ ೪ ॥ ಚೊತಶೋಕದ ಪತ್ರದೀ । ತೋರಣವ ।
ನೂತನದಿ ಗೈದು ಮುದದೀ ॥ ಖ್ಯಾತವಹ ರಚನೆಗಳನೂ । ರಚಿಸುವದು । ಪ್ರೀತಿಯಲಿ
ಕೇಳಿರಿದನೂ ॥ ೫ ॥ ಬಳಿಕ ಶುಭ್ರಸುಕಲಶದೀ । ಕೇಳ್ ತೀರ್ಥ । ಗಳನು ತುಂಬುತ ಮಂತ್ರದೀ ॥
ಹೊಳೆವ ಕಾಂಚನ ರತ್ನದೀ । ಶೃಂಗಾರ । ಗಳನು ಮಾಳ್ಪುದು ಮೋದದೀ ॥ ೬ ॥ ತುಳಸಿ ಕುಶ
ಚಂದನಗಳಾ । ಮಲ್ಲಿಕ ಬ । ಕುಳ ಕುಂದ ಕೇತಕಿಗಳಾ ॥ ಜಲಜಕುರುವಕ ಕುಮುದವೂ ।
ಕಲ್ಹಾರ । ಗಳನು ಕರವೀರದಳವೂ ॥ ೭ ॥ ಈಸು ಪುಷ್ಪವು ಕುಂಭದೀ । ಇಡು ಧಾನ್ಯ । ರಾಸಿ
ಗೈವುತ ಮಧ್ಯದೀ ॥ ಆ ಸುಕಲಶವನು ಯಿರಿಸೂ । ಯಮುನೆಯೆಂ । ಬಾ ಸುಮಂತ್ರದಿ ಪೂಜಿಸೂ
॥ ೮ ॥ ೭೩ ॥

ರಾಗ ಕಾಂಬೋಧಿ ಝಂಪೆತಾಳ

ರಾರಾಜಿಸುವ ಚತುರ್ದಶ ಗ್ರಂಥಿಗಳ ಪಟ್ಟೆ । ದಾರವನು ಕಲಶದಲ್ಲಿಡುತಾ ॥ ಆರಾಧಿಪುದು
ಧೂಪ ದೀಪಾದಿ ಪೋಡಶುಪ । ಚಾರ ಪೂಜೆಯನು ಗೈವುತಾ ॥ ೧ ॥ ಕೇಳು ನೃಪವರನೊಂದು
ಮುಷ್ಟಿ ದರ್ಭೆಗಳಿಂದ । ಲೇಳು ಹೆಡೆ ಶೇಷನನು ರಚಿಸೂ ॥ ಮೇಲು ವಸ್ತ್ರದ್ವಯವ ಸುತ್ತಿ
ಕಲಶಕ್ಕದರ । ಮೇಲಿಟ್ಟು ಪ್ರಾರ್ಥಿಸುತ ಭಜಿಸೂ ॥ ೨ ॥ ವರಶಂಖ ಚಕ್ರ ಗದೆ ಕಮಲಗಳ
ಪಿಡಿದ ಶುಭ । ಕರ ಚತುರ್ಭುಜ ಪೀತಾಂಬರದೀ ॥ ಮೆರೆವನಂತನ ಮೂರ್ತಿಯನ್ನು
ತನ್ಮಧ್ಯದೊಳ । ಗಿರಿಸುವದು ಮಂತ್ರೋಕ್ತ ವಿಧದೀ ॥ ೩ ॥ ದ್ವಾದಶಾಕ್ಷರ ಮೂಲ
ಮಂತ್ರದಿಂದಾವಾಹ । ನಾದಿ ಪೂಜೆಯನು ಗೈವುತ್ತಾ ॥ ಸಾಧುಫಲ ಪಕ್ವಾನ್ನ ಕಜ್ಜಭೋಜ್ಯಗಳ
ನೈ । ವೇದ್ಯವನು ಮಾಡುವದು ಮುದದೀ ॥ ೪ ॥ ಮಂಜುಳಮಯಂಗೆ ತಾಂಬುಲ ಸಮರ್ಪಿಸುತ
ನೀ । ರಾಂಜನಾರತಿಗಳನು ಬೆಳಗೀ ॥ ರಂಜಿಸುವ ಛತ್ರ ಚಾಮರ ವ್ಯಜನ ದರ್ಪಣಾಗ । ಳಿಂ

ಜಯವೆನುತ ಸೇವೆಯೆಸಗೀ ॥ ೫ ॥ ಪ್ರಾರ್ಥನೆ ಪ್ರದಕ್ಷಿಣೆ ನಮಸ್ಕಾರದಿಂ ಜನ್ಮ । ಸಾರ್ಥಕವ
ಗೈದು ಸದ್ವಿಧದೀ ॥ ಅರ್ತಿಯೊಳನಂತನ ನಿವೇದ್ಯವನು ಸಕಲ ವಿ । ಪ್ರೋತ್ತಮರಿಗುಣಿಸುವದು
ಮುದದೀ ॥ ೬ ॥ ದೃಢದಿ ದ್ವಿಜರಿಂಗೆರಡು ಫಲದಾನ ಬಾಗಿಣವ । ಕೊಡುವದು
ಯಥಾದಕ್ಷಿಣೆಯನೂ ॥ ವಡನಿಟ್ಟು ಸದ್ಭಕ್ತಿಯಿಂದಾ ವಿಧ್ಯುಕ್ತದಿಂ । ದೊಡನೆ ಪೂಜಿಸುವ
ವಿಪ್ರರನೂ ॥ ೭ ॥ ದ್ವಿಜರುಂಡು ದಣಿಯಲಾಶೀರ್ವಾದಗೊಂಡು ಸಿರಿ । ವ್ರಜದ ಮಂತ್ರಾಕ್ಷತೆಯ
ಧರಿಸೀ ॥ ನಿಜಶಿರದಿ ಪುತ್ರಪೌತ್ರರ ಕೂಡಿ ಶೇಷಾನ್ನ । ತ್ಯಜಿಸದುಣ್ಣುವದುಮನೆವೆಳಸೀ ॥ ೮ ॥
ವಿತ್ತಾನುಸಾರ ದಕ್ಷಿಣೆ ದಾನಗಳನು ವಿ । ಪ್ರೋತ್ತಮರಿಗಿತ್ತು ಭಕ್ತಿಯಲೀ ॥
ಮತ್ತಬುದವಬುದವೀ ಪರಿಯೊಳಗನಂತಕೃಪೆ । ವೆತ್ತಿ ಬರಲೆನ್ನು ಮನಸಿನಲೀ ॥ ೯ ॥ ೮೨ ॥

ರಾಗ ಬಿಲಹರಿ ಆದಿತಾಳ

ಕೇಳಿದೆಯಾ ನರಪಾಲರತುನವೆ ಶ್ರೀ । ಲೋಲಾನಂತನ ವ್ರತವಾ । ಪೂಜೆ ಕಲ್ಪವಾ ॥
ಖೂಳ ದರಿದ್ರವಡಗಿದ್ಯೆಶ್ವರ್ಯವ । ಬಾಳುವ ಸಂಪದವಾಳುವ ಪರಿಯಾ ॥ ಕೇಳಿದೆಯಾ ॥
ಪಲ್ಲ ॥ ಮನೆಯೂರು ಸ್ವಗ್ರಾಮವನುಕೂಲವಿಲ್ಲದ । ಜನರೆಮುನೆಯ ತೀರದೀ । ಸದ್ವಿಧದೀ ।
ಅನುಗೊಳಿಸುತ ವ್ರತವನು ಮಾಳ್ಪದು ಪ್ರಾರ್ಥನೆ ಗೈವುತ ಪಟ್ಟೆಯ ದಾರವ ದಕ್ಷಿಣ ತೋಳಿಗೆ
ಗಂಡಸರಿಗೆ ಮತ್ತಾ । ವನಿತೆಯರಿಂಗೆಡ ಭುಜಕೆ ಕಟ್ಟುವದೂ ॥ ಕೇಳಿದೆಯಾ ॥ ೧ ॥ ಮೆರೆವ
ಶ್ರೀಹರಿಯ ಮಂದಿರದೊಳಗಶ್ವತ್ಥ । ತರುವಿನ ನೆಳಲಿನಲೀ । ಭಕ್ತಿಯಲೀ । ವಿರಚಿಸುವದು
ವ್ರತವನ್ನನುಕೂಲವಾ । ಗಿರಲು ಸ್ವಗೃಹದಲಿ ಪೂಜಿಸುತಿರುಳು ಜಾ । ಗರ ಗೈವುತ್ತ ವಿಸರ್ಜನೆ
ಪೂಜೆಯ । ಮರುದಿನದುದಯಕಾಚರಿಪುದು ಮುದದೀ ॥ ಕೇಳಿದೆಯಾ ॥ ೨ ॥ ಚದುರ
ಚತುರ್ದಶ ಗ್ರಂಥಿಯ ದಾರವ । ಮುದದಿ ಧರಿಸಿ ತೋಳಿಗೇ । ಆ ಘಳಿಗೇ । ಮೊದ
ಲಾದಾರವನಿಡು ಕಡೆಗೀ ವ್ರತ । ವಿದ ಭೂವರ ನೀನೆಸಗಲು ಸೋತಿಹ । ಪದ ಪಿಂ ತಿರುಗುತ
ಬಪ್ಪುದು ನಿಜವ್ಯೆ । ಮುದದಿಂ ರಚಿಸೆಂದನು ಮಧು ಹರನೂ ॥ ಕೇಳಿದೆಯಾ ॥ ೩ ॥ ೮೫ ॥

ವಾರ್ಧಿಕ್ಯ

ಕಂತುಜನಕನ ನುಡಿಯ ಲಾಲಿಸುತ್ತಾಗ ಭೂ । ಕಾಂತನತಿ ಭಕ್ತಿಯಲಿ ಕೇಳ್ದನೆಲೆ ದೇವ
ನಾ । ನಂತನೆಂಬವನ್ಯಾವ ದೇವನವ ನಾಗ ತಕ್ಷಕ ಸರ್ಪ ಶೇಷ ಪತಿಯೋ ॥ ಪಿಂತ್ಯಾರು
ರಚಿಸಿದರು ಸದ್ವ್ರತವನದರ ಫಲ । ಮೆಂತು ಪಡೆದರು ಸೌಖ್ಯವೆಂದೆಂಬ ನಿಖಿಳ ವೃ । ತ್ತಾಂತವಂ
ಕರಣಿಸುವದೆನಲು ನಸು ನಗುತ ಮುರರಿಪು ವಿಸ್ತರಿಸುತಿರ್ದನೂ ॥ ೧ ॥ ೮೬ ॥

ರಾಗ ಮಧ್ಯಮಾವತಿ ಜ ತ್ರಿವುಡೆತಾಳ

ಭೂಪ ಲಾಲಿಸನಂತನೆಂಬವ । ಶ್ರೀಪರಮ ಪುರುಷ ಕಣಾ ॥ ತಾಪ ರಹಿತನ ವ್ರತದೊಳಿಹ
ಪರ । ದಾ ಪರಮ ಸಂಪದಗಳೂ ॥ ಅಹುದು ಜಗದೀ ॥ ೧ ॥ ಚರವಚರ ಜೀವರಿಗೆ ಚೇತನ ।
ಭರಿತನದರೊಳನಂತನೂ ॥ ಮೆರವ ವಿಶ್ವವ್ಯಾಪ್ತನಾಗಿಹ । ವಿರಳನದರೊಳನಂತನೂ ॥
ಎಂದನಾಗಾ ॥ ೨ ॥ ಮುನ್ನ ಕೃತಯುಗದೊಳಗೆ ಶ್ರುತಿಸಂ ॥ ಪನ್ನನೆನಿಪ ಸುಮಂತನೂ ॥

Scanned by CamScanner

ತನ್ನುಟಜದೊಳಗಿರ್ದ ಬಲುವ್ಯ । ತ್ಪನ್ನನೆನಸಿ ಸುಮಂತನೂ ॥ ಮೆರೆದನಾಗಾ ॥ ೩ ॥ ಭೃಗುಋಷೀಶ್ವರನಿಂಗೆ ಪುಟ್ಟಿದ ॥ ಮಗಳು ಧರ್ಮಿಣಿ ನಾಮದಾ ॥ ಸುಗುಣೆ ರನ್ನೆಯ ಮದುವೆಯಾದನು । ಲೊಗುಮಿಗೆಯ ಸನ್ನಾಹದಾ ॥ ಸಂಭ್ರಮದಲೀ ॥ ೪ ॥ ಗೃಹಿಣಿ ಗೃಹರಕ್ಷಾರ್ಥೆಯೆನ್ನುವ । ಸಹಜಗುಣ ಸಂಪನ್ನೆಯೂ ॥ ವಿಹಿತ ಸತ್ಕೃತಿಯಿಂದ ಪತಿಮನ । ಕಹುದೆನಿಸಿದಳು ನಾರಿಯೂ ॥ ಪತಿಯ ಹಿತದೀ ॥ ೫ ॥ ಇರಲು ಧರ್ಮಿಣಿ ನಾರಿ ಗರ್ಭವ । ಧರಿಸಿದಳು ಚಿಹ್ನೆಗಳನೂ ॥ ಪರಿಕಿಸುತಲತಿ ಸಂತಸವ ತಾ । ಳ್ದಿರುತಲಿರ್ದ ಸುಮಂತನೂ ॥ ಅನುದಿನದಲೀ ॥ ೬ ॥ ೯೭ ॥

ರಾಗ ಸಾಂಗತ್ಯ ರೂಪಕತಾಳ

ಧರ್ಮಿಣಿಯುದರಾಬ್ಧಿಯೊಳಗೆ ಸದ್ಗುಣಗಣ । ಪೇರ್ಮೆಯ ಪಿಂಡ ಬೆಳೆಯಲೂ ॥ ಊರ್ಮಿಪ ಗರ್ಭಚಿಹ್ನೆಗಳಿಂದಲೆಸೆದಳು । ನಿರ್ಮಲೆ ಸ್ವರ್ಣ ಬಣ್ಣದಲೀ ॥ ೧ ॥ ನಡೆ ಮಂದವಾಗೆನುಣ್ದೊಡೆ ತುಂಬಿ ಜಘನಗಳ್ । ಮಡಮಾಗಿ ಬಡನಡು ಬೆಳೆಯೇ ॥ ಪೊಡೆದೊರೆ ತ್ರಿವಳಿಗಳಡಗೆ ಬಲ್ಮೊಲೆಗಳ್ಕ । ಪ್ಪಿಡಿದೆಸದಳು ದ್ವಿಜಮಡದೀ ॥ ೨ ॥ ಕಲ್ಪಿತಬಯಕೆ ಸಂಕಲ್ಪಿಸುತಿಚ್ಛೆಯಿಂ । ದಲ್ಪಹಾರವನೆ ವುಣ್ಣುಗಳೂ ॥ ಬಲ್ಪಿರದ ವಯವದೊಲ್ಪುದೋರಲು ಮೃದು । ತಲ್ಪವ ಬಯಸುವಳ್ಕನದೀ ॥ ೩ ॥ ಬಂಧು ಬಳಗದವರ್ಬಂದು ಬಯಕೆ ಯೇನೇ । ನೆಂದು ಕೇಳುತಲುಣಿಸುವರೂ ॥ ಅಂದೆಡ ಬಲದ ನಾರಿಯುರುಪಚರಿಸಿದ । ರಿಂದುಮುಖಿಯನನುದಿನದೀ ॥ ೪ ॥ ೯೮ ॥

ಕಂದಪದ್ಯ

ಕಾಂತೆಯು ಗರ್ಭವ ಧರಿಸಲು । ಸಂತಸದಿಂದಾಗಪುಂಸ ವನಸೀಮಂತಂ ॥ ತಾಂ ತಳುವದೆ ವಿರಚಿಸಿ ದ್ವಿಜ । ತಿಂತಿಣಿಯನುಪಚರಿಸುತ್ತಲೀರ್ದ ಸುಮಂತಂ ॥ ೧ ॥ ೯೯ ॥

ರಾಗ ಢವಳ ತ್ರಿವುಡೆತಾಳ

ಭೃಂಗಕುಂತಳೆಗೆ । ಮಂಗಲಾಂಗಿನಿಗೆ । ಶೃಂಗಾರದ ನಾರೀ ಶುಭಕಾರೀ । ಶುಭಕಾರಿ-ಧರ್ಮಿಣಿಗೆ । ಹಿಂಗಾರದ ಹುವ್ವಾ ಮುಡಿಸಿದರೂ ॥ ಶೋಭಾನೇ ॥ ೧ ॥ ಪಲ್ಲವಪಾಣಿಗೆ ಫುಲ್ಲಲೋಚನೆಗೆ । ಬಲ್ಲಾ ಸುಜಾಣೇ ಪಿಕಗಾನೇ । ಪಿಕಗಾನೆ ಧರ್ಮಿಣಿಗೆ । ಮಲ್ಲಿಗೆಯ ಹೂವ್ವಾ ಮುಡಿಸಿದರೂ ॥ ಶೋಭಾನೇ ॥ ೨ ॥ ಕರಿರಾಜಯಾತ್ರೆಗೆ । ಸುರುಚಿರ ಗಾತ್ರೆಗೆ । ಪರಮ ಪವಿತ್ರೇ ಸುಚರಿತ್ರೇ । ಸುಚರಿತ್ರೆಗೆ ಸುಗುಣೆಯರೆಲ್ಲರು । ಸುರಗಿಯ ಹೂವ್ವಾ ಮುಡಿಸ್ಯಾರೂ ॥ ಶೋಭಾನೇ ॥ ೩ ॥ ೧೦೦ ॥

ರಾಗ ಮಧ್ಯಮಾವತಿ ಏಕತಾಳ

ಮುನಿಗಳು ಕೇಳಿ ಧರ್ಮಿಣಿಯುದರದಲೀ । ಅನುರಾಧಾ ತಾರೆ ಸುಲಗ್ನೋದಯದಲೀ ॥ ಅನುಗುಣದಲಿ ಪಡೆದಳು ಕನ್ನಿಕೆಯನೂ । ಮನದಿ ಸುಮಂತ ಸಂತಸವ ತಾಳಿದನೂ ॥ ೧ ॥

ಪಾಲನೆಗೈವುತ್ತ ಪರಮ ಸಂಭ್ರಮದೀ । ಶೀಲೆಯೆಂದೆಂಬ ನಾಮವನಿಟ್ಟು ಮುದದೀ ॥ ಬಾಲಲೀಲೆಯ ನೋಡಿ ಬಲು ಸಂತಸದಲೀ । ಬಾಲಕಿಯನು ಸಲಹಿದ ವಿಭವದಲೀ ॥ ೨ ॥ ಪೊಳೆವ ಪೊಂಬಾಳೆಯಂದದಿ ಪ್ರಬಲಿಸುತಾ । ಬೆಳೆದಳು ಬಾಲಕಿ ಬಲದಿ ವರ್ಧಿಸುತಾ ॥ ಚಲುವಿಕೆ ರೂಪು ರಂಜಿತ ಗುಣಗಳಲೀ । ಪೊಳಲಿನ ಜನರೆಲ್ಲ ಪೊಗಳಲರ್ತಿಯಲೀ ॥ ೩ ॥ ೧೦೩ ॥

ವಾರ್ಧಿಕ್ಯ

ಭೂಲೋಲ ಕೇಳೈದು ವರುಷ ಕನ್ನಿಕೆಗಾಗೆ ॥ ಕಾಲನೂರಿಗೆ ತೆರಳಿದಳು ಬಳಿಕ ಧರ್ಮಿಣಿಯು । ಮೇಲೆ ವೈವಾಹದೊಳ್ ಚಂಡಿಯೆಂಬಾಕೆಯಂ ವರಿಸಲು ಸುಮಂತೆ ನೊಲಿದೂ ॥ ಬಾಲೆ ದುರ್ಗುಣೆ ದುರಾಗ್ರಹಿ ದುಷ್ಟೆ ದುಷ್ಕೃತೆ ನಿ । ರಾಲಸ್ಯೆ ದುರ್ಮತ್ಸರೆಯ ಕಲಹಕಾರಿಣಿಯ । ಲೀಲೆಯಂ ಕಂಡು ಕಡುನೊಂದವಳ ಮನಸಿನೊಲವಿದ್ದಂತೆ ನಡೆವುತೀರ್ದಾ ॥ ೧ ॥ ೧೦೪ ॥

ರಾಗ ಮಾರವಿ ಅಷ್ಟತಾಳ

ಏನನೆಂಬೆನು ಚಂಡಿಯ ಗುಣವಾ । ಗುಣ । ಹೀನೇ ನಿಷ್ಠುರ ತರದವಾಕ್ಯವಾ ॥ ಏನ ॥ ಪಲ್ಲ ॥ ಕೊರಗುತ್ತಲಿರುವಳು ಕಲಹವ ಗೈವಳು । ನೆರೆಹೊರೆಯವರ ಕಂಡರೆ ಬೈವಳೂ ॥ ನಿರತದಿ ಹೊಗೆಮೊಗದವಳು ನಿಷ್ಠೂರೆ ನಿ । ಷ್ಕರುಣೆ ನೆಟ್ಟನೆ ಮೊಗದಿರುಹುವಳೂ ॥ ಏನ ॥ ೧ ॥ ಪತಿಯೊಂದ ಪೇಳ್ದರೆ ತಾನೊಂದ ಮಾಳ್ಪಳು । ಪ್ರತಿವಾದಿಸುವಳು ವೊಂದಕೆ ನೂರನೂ ॥ ಜತೆಗೂಡಬೇಕವಳೊಲಿದಾಗಳಲ್ಲದೆ । ರತಿಗೊದಗಳು ಗಂಡನೊಲಿದಾಗಲೂ ॥ ಏನ ॥ ೨ ॥ ತಿರ್ಕಣೆ ಗೈವಳು ತಿಳಿದ ಮಹಾತ್ಮರ । ನಾರ್ಕಂಡರವರ ಲಕ್ಷಕೆ ತಾರಳೂ ॥ ಮೂರ್ಖತ್ವದಲಿ ಬಲು ಕರ್ಕಶೆಯಾಗಿರೆ । ಕರ್ಕಶೆಯೆಂದು ಕರೆವರೆಲ್ಲರೂ ॥ ಏನ ॥ ೩ ॥ ೧೦೫ ॥

ದ್ವಿಪದಿ

ಕೇಳು ನೃಪ ಕರ್ಕಶೆಯ ಕಲಹಗಳಿವೆಲ್ಲಾ । ಮೂಲ ಸಹಜವ ನಿಲಿಸಲ್ಯಾರಿಗಳವಲ್ಲಾ ॥ ೧ ॥ ಸುದತಿ ಸ್ವಯಿಚ್ಛಾ ಸ್ವಭಾವದಿಂದಿರಲೂ । ಮೊದಲರಸಿಸುತೆ ಶೀಲೆ ಸದನದಿ ಬೆಳೆಯಲೂ ॥ ೨ ॥ ಮುದ್ದುಮೊಗ ಮುಗುಳುನಗೆ ಮೃದುಕೀರ ವಾಣೀ । ಶುದ್ಧಗುಣ ರನ್ನೆ ಮೋಹನ್ನೆ ಫಣಿವೇಣೀ ॥ ೩ ॥ ಬಾಲೇಂದುಫಾಲೆ ಗುಣಜಾಲೆ ಶುಭಶೀಲೇ । ಮೇಲೆನಿಪ ದರ್ಪಣಕಪೋಲೆ ಸ್ಮೃತಿಲೋಲೇ ॥ ೪ ॥ ಚಂದ್ರನಿಭವದನೆಯರವಿಂದದಳನಯನೇ । ಗಂಧಫಲನಾಸಿಕವು ಗಂಧೇಭಗಮನೇ ॥ ೫ ॥ ಆರ ನೋಡಿದರು ಬಹುವಿನಯ ನಯನುಡಿಯಾ । ತೋರಿ ಸರ್ವರು ಪೊಗಳುತಿರುವ ಸುಚರಿತೆಯಾ ॥ ೬ ॥ ಇರಲಿಂತು ಪಿತನ ಮಂದಿರದಿ ಬೆಳಗುತ್ತಾ । ತರಳೆ ವರ್ಧಿಸುತಿರೆ ಸುಮಂತ ನೋಡುತ್ತಾ ॥ ೭ ॥ ವರನಿವಳಿಗಿನ್ನಾಗಬೇಕೆನುತ ಮನದೀ । ಅರಸುತ್ತಲನುಸರಿಸಿ ಹುಡುಕುವನು ಮುದದೀ ॥ ೮ ॥ ಅನ್ನಗಂ ವೇದ ಸಂಪನ್ನನೆಂದೆನಿಪಾ । ಚನ್ನಗುಣರನ್ನ ಕೌಂಡಿನ್ಯ ಮುನಿದೀಪಾ ॥ ೯ ॥ ಬರಲೊಂದು ದಿನ ಮನೆಗೆ ಕರೆದು ಸತ್ಕರಿಸೀ ।

Scanned by CamScanner

ತರಳೆ ಶೀಲೆಗೆ ತಕ್ಕ ವರನೆಂದು ನುಡಿಸೀ ॥ ೧೦ ॥ ಅನುಸರಿಸಲಾಗ ಲಗ್ನವನು ನಿಶ್ಚೈಸೀ। ಅನುಕಲಾವುದ್ವಾಹ ರಚನೆಗಳ ತರಿಸೀ ॥ ೧೧ ॥ ವಿವಿಧ ವೈಭವದ ವೈವಾಹ ರಚನೆಗಳಾ। ಸವನಿಸುತ ಸಕಲ ಸನ್ನಹ ಸಾಧನಗಳಾ ॥ ೧೨ ॥ ೧೧೯ ॥

ರಾಗ ಢವಳ ಜ ಏಕತಾಳ

ಬಾಲಕಿಯರ ಕುಲಮಣಿಗೇ । ಬಾಲೆ ಸುಶೀಲೆ ಕನ್ನಿಕೆಗೇ । ಮೇಲೆನಿಸುವ ಸಿತ ವಸ್ತ್ರವನುಡಿಸೀ । ಬಾಲೆಯರೆಲ್ಲರು ಕೂಡಿ ಶೃಂಗರಿಸೀ । ಕಾಲುಂಗುರ ಸರಪಣಿ ಝಣತ್ಕರಿಸಲು। ಲೀಲೆಯಿಂದಾಗಾ ಹರಸಿದರೂ ॥ ಶೋಭಾನೇ ॥ ೧ ॥ ಮೆರೆವ ಕೌಂಡಿನ್ಯಗೆ ಮುದದೀ। ಚರಣವ ತೊಳೆದು ಸಂಭ್ರಮದೀ । ವಿರಚಿಸುತಲೆ ಮಧುಪರ್ಕ ಪೂಜೆಯನೂ । ತೆರೆವಿಡಿವ್ರತ ಸಾಧಿಸಿ ಲಗ್ನವನೂ । ಧರೆಯಮರರ ಪೌರೋಹಿತರುಭಯರ । ಪರಂಪರೆಯಾನುಚ್ಚರಿಸೀ ॥ ಶೋಭಾನೇ ॥ ೨ ॥ ದೇವ ಕೌಂಡಿನ್ಯನ ಕರದೀ । ದೇವಿ ಶೀಲೆಯ ಕರವಿರಿಸೀ । ಭೂವಿಬುಧರ ಮಂತ್ರಂಗಳುಲಿಯಲೂ । ಸಾವಧಾನ ಸುಮುಹೂರ್ತವೆಂದೆನಲೂ । ಶ್ರೀವರಗರ್ಪಿತವೆನುತ ಸುಮಂತನು । ವೋವಿಧಾರೆಯನೂ ಯೆರೆದಾನೂ ॥ ಶೋಭಾನೇ ॥ ೩ ॥ ಮುದದಿ ಕಂಕಣ ದಾರವನೂ । ಮದುವಣಿಗರಿಗೆ ಕಟ್ಟೆದನೂ । ಮುದದಿಂ ಲಾಜಹೋಮವ ರಚಿಸಿದರೂ। ಸುದತಿಯರೆಲ್ಲ ಶೋಭನವ ಪಾಡಿದರೂ । ಪದುಳ ಪೂದಾಂಬುಲ ಫಲದಾನಗಳನು। ಬುಧಜನರ್ಗಿತ್ತೂ ನಮಿಸಿದಾ ॥ ಶೋಭಾನೇ ॥ ೪ ॥ ವರ ವಧುಗಳ ನೀರ್ವರನೂ । ಮೆರೆವ ಹಸೆಯಲಿ ಕುಳ್ಳಿರಿಸೀ । ತರುಣಿಯರೆಲ್ಲ ಸುಸ್ವರದಿ ಪಾಡುತಲೀ । ಹರಸುತಕ್ಷತೆಯ ಸೇಸೆಯನಿಕ್ಕುತಲೀ । ಸಿರಿ ಕರವಹ ಕೌಂಡಿನ್ಯಗೆ ಶೀಲೆಗೆ ಕುರುಜಿನಾರಾತಿಯಾ ಬೆಳಾಗೀರೇ ॥ ಶೋಭಾನೇ ॥ ೫ ॥ ೧೨೪ ॥

ಭಾಮಿನಿ

ಜನಪ ಕೇಳುದ್ವಾಹ ನಾಲ್ಕನೆ । ದಿನದಿರುಳು ಕೃತನಾಗವಲ್ಲಿಯ । ನನುಕರಿಸುತ ಚತುರ್ಥಿಯುತ್ಸವವಾಗೆ ಮರುದಿವಸಾ ॥ ವನಿತೆಯರು ವೋಕುಳಿಯನಾಡುತ । ಸಂತಸವೆತ್ತುತಿರಲಾ । ಗನಿಬರಿಗೆ ಭೋಜನ ಪುದಾಂಬುಲದಿಂದ ಮನ್ನಿಸಿದಾ ॥ ೧ ॥ ೧೨೫ ॥

ರಾಗ ಭೈರವಿ ಝಂಪೆತಾಳ

ಮದುವೆಯುತ್ಸವವಾಗೆ । ಮುದದಿ ದಂಪತಿಗಳನು । ಪದುಳದಿಂದಲಿ ಮನ್ನಿ । ಸಿದ ವಿನೋದದಲೀ ॥ ೧ ॥ ಕೆಲವು ದಿನ ಗೃಹದಿ ಮಗ । ಳಳಿಯರನ್ನಿರಿಸಿಕೊಂ । ಡೊಲುಮೆಯಿಂದಲಿ ಮನ್ನಿ । ಸಲು ವೈಭವದೊಳೂ ॥ ೨ ॥ ಮುನಿ ಕೌಂಡಿನ್ಯನು ತನ್ನ । ಮನೆಗೆ ಸತಿಸಹಿತಲೆ ಪ । ಯಣಗೈಯಲಾ ಸುಮಂ । ತನು ಸತಿಯ ಕೇಳ್ದಾ ॥ ೩ ॥ ಎಲೆಗೆ ಮಗಳಳಿಯರಿಗೆ । ಬಳುವಳಿಯ ಕೊಡಲೇನ । ನುಳುಹಿದುದ ತಾರೆನಲು । ಮುಳಿದೆಂದಳಾಗಾ ॥ ೪ ॥ ಕೊಡಲೊಲ್ಲೆನೇನುವನು । ಕೊಡಲು ನಿನ್ನಯ ಮನೆಯ । ಬಿಡುವೆನೆಂದಾ ಚಂಡಿ ನುಡಿಯೆ ಲಾಲಿಸುತಾ ॥ ೫ ॥ ಗುಟ್ಟಿನಿಂದಾಗಲಿ ನಿ । ಪಿಷ್ಟವಿದ್ದುದ ವಿಪ್ರ । ಕೊಟ್ಟು ಕಳುಹಿದ ಮಗಳ । ಕಟ್ಟಿಕಡೆಗಂದೂ

॥ ೬ ॥ ಬೊಪ್ಪಗೊಂದಿಸಿ ತಾಯೊಳಪ್ಪಣೆಯಗೊಂಡಾಗ । ಕ್ಷಿಪ್ರದಿಂದಲಿ ಪೊರಟ । ಳೊಪ್ಪಿಗೆಯೊಳಂದೂ ॥ ೭ ॥ ೧೩೨ ॥

ರಾಗ ಕೇತಾರಗೌಳ ಜ ಅಷ್ಟತಾಳ

ವ್ರತಿಪ ಕೌಂಡಿನ್ಯನು ಸತಿಸಹಿತಲೆ ತಾನು । ರಥವನೇರುತ ಮುದದೀ ॥ ಅತಿರೂಪವತಿ ಸುಲಲಿತೆಯ ಶೀಲೆಯ ಗುಣ । ಕತಿ ಹರುಷಿಸಿ ಜವದೀ ॥ ೧ ॥ ಬರುತಿರೆ ಮಾರ್ಗದಿ ಹರಿವ ನದಿಯ ತಟ । ಕಿರದಂದು ಬಂದಾಗಾ । ಮೆರೆವ ಶಕಟವನ್ನುತ್ತರಿಸಿ ಸ್ನಾನವ ತಾನಾ । ಚರಿಸುವೆನೆಂದು ಬೇಗಾ ॥ ೨ ॥ ನಡೆದ ಕೌಂಡಿನ್ಯನು ಸ್ನಾನಸಂಧ್ಯಾನಕೆಂ । ದೊಡನೆ ನದಿಯ ತಡಿಗೇ ॥ ಮಡದಿ ಶೀಲೆಯು ನದಿಗಿಳಿವುತ್ತ ಬಂದಾಗಲೆಡಬಲ ನೋಡಿದಳೂ ॥ ೩ ॥ ಶೀಲೆಯು ನದಿಗಾಗಿ ಬಂದಳು ಪಾದ ಪ್ರ । ಕ್ಷಾಲನಕೆನುತಲಂದೂ ॥ ಬಾಲಕಿಯರು ಬಹು ಜನರು ಶೃಂಗಾರದ । ಮೇಳದಿಂದಿರಲು ಕಂಡೂ ॥ ೪ ॥ ಬಂದಳು ಶೀಲೆ ವಯ್ಯಾರದೊಳಿಹ ಕಾಂತಾ । ಸಂದೋಹವಿದ್ದೆಡೆಗೇ ॥ ನಿಂದು ಕೇಳಿದಳು ಯಿದೇನೆನುತವರನ್ನು । ವಂದಿಸಿ ಪದಗಳಿಗೇ ॥ ೫ ॥ ೧೩೭ ॥

ರಾಗ ಪಂತುವರಾಳಿ ಆದಿತಾಳ

ಎಲ್ಲರೊಂದಾಗಿಲ್ಲಿ ನೆರದಿರ್ಯಾಕವ್ವಗಳಿರಾ । ನಿಲ್ಲದೆನ್ನೊಳರುಹಿ ದಯದಿ ಫುಲ್ಲಾಂಬಕಿಯರಿರಾ ॥ ೧ ॥ ಆವ ಪುಣ್ಯ ಕಾಲವಿಂದು ತಿಳುಹಿರವ್ವಗಳಿರಾ । ಭೂವಿಬುಧರೆಲ್ಲ ನೆರದರ್ಯಾತಕವ್ವಗಳಿರಾ ॥ ೨ ॥ ವ್ರತವೆ ನೀವು ಮಾಳ್ಪುದು ಸದ್ವ್ರತ ವೇನವ್ವಗಳಿರಾ । ಹಿತವೇನಿದರ ಕಾರಣಾ ಸಂಗತಿ ಯೇನವ್ವಗಳಿರಾ ॥ ೩ ॥ ಆರ ವ್ರತವಿದುವೆ ಪಟ್ಟೆ-ದಾರವವ್ವಗಳಿರಾ । ಚಾರುಪೂಜೆ ಗೈವಿರೇಕೆ ಪೇಳಿರವ್ವಗಳಿರಾ ॥ ೪ ॥ ಇಷ್ಟವಿದಿನ್ಯಾರಿಗೇ ಸಂತುಷ್ಟವವ್ವಗಳಿರಾ ॥ ಸಿಟ್ಟಾಗದೆ ಪೇಳಿರೀಗ ಶ್ರೇಷ್ಟ್ವವ್ವಗಳಿರಾ ॥ ೫ ॥ ೧೪೨ ॥

ಕಂದಪದ್ಯ

ಇಂತೆಂದತಿ ದೈನ್ಯದೊಳು ಸು । ಮಂತನ ಸುಕುಮಾರಿ ಕೇಳಲದರೊಳಗೋರ್ವಳ್ ॥ ಸಂತಸದಿ ಶೀಲೆಗೊರೆದಳ । ನಂತನ ವ್ರತದಾಗಮವನು ಬಲುವಿಸ್ತರದೊಳ್ ॥ ೧ ॥ ೧೪೩ ॥

ರಾಗ ಸುರುಟಿ ಏಕತಾಳ

ಲಾಲಿಸು ಬಾಲಕಿಯೇ । ಸದ್ಗುಣ । ಶೀಲೆ ನೀಲಾಳಕಿಯೇ ॥ ಪೇಳುವೆ ಸಕಲೈಶ್ವರ್ಯ ಭಾಗ್ಯಗಳ ವಿ । ಶಾಲತೆ ಪಡೆಯುವ ಮೂಲಸಾಧನಗಳ । ಲಾಲಿಸು ॥ ೧ ॥ ಕಾಂತಾಮಣಿ ಜಾಣೆ । ಇದುವೆ ಅ । ನಂತನ ವ್ರತ ಕಾಣೇ । ಸಂತತ ಸಕಲೈಶ್ವರ್ಯಸಿದ್ಧಕರ । ಚಿಂತಿತಾರ್ಥ-ವೀವನು ಕರುಣಾಕರ । ಲಾಲಿಸು ॥ ೨ ॥ ಅಖಿಲ ವ್ರತಗಳೊಳಗೇ । ಸುಖ ಸಾ । ಧಕವಿದು ಧರೆಯೊಳಗೇ ॥ ಅಕುಟಲೆ ನೀನಾಚರಿಸುವೆಯಾದರೆ । ಸಕಲ ಸನ್ನಾಹವ ಪ್ರಕಟದಿ ಕೊಡುವೆವು ॥ ಲಾಲಿಸು ॥ ೩ ॥ ದಾರವ ಪೂಜಿಪುದೂ । ಷೋಡಶೋಪ । ಚಾರವ ಮಾಡುವದೂ ॥ ನಾರಿ

Scanned by CamScanner

ಕೇಳಡದ ಭುಜಕೆ ಕಟ್ಟಿದರೆ ಅ। ಪಾರದೈಶ್ವರ್ಯವ ತೋರಿಸಿ ಕೊಡುವದು ॥ ಲಾಲಿಸು ॥ ೪ ॥ ಎನಲು ವ್ರತಾಗಮವಾ। ಕೇಳಿದ। ಳನುಪಚರಿಸುತ ಮನವಾ ॥ ಅನಿಬರೊಡನೆ ಸನ್ನಾಹವ-ಗೊಂಡಳು। ವನಿತೆ ಶೀಲೆ ವ್ರತವನು ಮಾಡಿದಳೂ ॥ ಲಾಲಿಸು ॥ ೫ ॥ ೧೪೮ ॥

ರಾಗ ಸಾವೇರಿ ಆದಿತಾಳ

ಜಯತು ಜಯತು ಜಯಜಯವೆನುತಾ। ಸದ್ವಿ। ನಯದೊಳನಂತನ ವ್ರತವನೆಸಗುತಾ ॥ ಜಯತು ॥ ಪಲ್ಲ ॥ ಮೇಳದ ಸತಿಯರೊಡನೆ ಬೆರದೂ। ಶೀಲೆಯ ನಂತನ ವ್ರತವಗೈದೂ। ಮೇಲೆ ಚತುರ್ದಶ ಗ್ರಂಥಿದಾರವ ವಾಮ। ತೋಳಿಗೆ ಕಟ್ಟಿಕೊಂಡಳು ಬಲಿದೂ ಜಯತು ॥ ೧ ॥ ಪಿತ ತನಗಿತ್ತಿಹ ಪಿಷ್ಟವನೂ। ಸತಿ ಸಮರ್ಪಿಸುತ ನೈವೇದ್ಯವನೂ। ಅತಿ ಭಕ್ತಿಯೊಳೊಂದಿಸಿ ಪ್ರಾರ್ಥಿಸಿ ಶಿರೀ। ಪತಿಯೊಳು ಪಡೆದಳೈಶ್ವರ್ಯವನೂ ॥ ಜಯತು ॥ ೨ ॥ ಇಂತು ಶೀಲೆ ಸದ್ಭಕ್ತಿಯಲೀ। ಅನಂತ ವ್ರತವನಾಚರಿಸುತಲೀ। ಕಾಂತೆಯರನು ಬೀಳ್ಕೊಂಡಾಗಲು ತನ್ನ। ಕಾಂತನೆಡೆಗೆ ಬರಲೊಲವಿನಲೀ ॥ ಜಯತು ॥ ೩ ॥ ೧೫೧ ॥

ಭಾಮಿನಿ

ಸತಿ ಶಿರೋಮಣಿ ಯಿತ್ತನಂತನ। ವ್ರತ ಸಮರ್ಪಣೆ ಗೈದು ಬರಲನು। ಪ್ರಿತವ ರಚಿಸುತ ಬಂದನಾ ಕೌಂಡಿನ್ಯ ವರಮುನಿಪಾ ॥ ಪತಿ ಸತಿಯರಿಬ್ಬರು ಮುದದಿ ಗೋ। ರಥವಡರಿ ಬರಲಾಶ್ರಮಕೆ ಗೃಹ। ದತಿಶಯವನೇನೆಂಬೆ ಬಲು ಸಮೃದ್ಧಿಯಿಂದಿರಲೂ ॥ ೧ ॥ ೧೫೨ ॥

ವಾರ್ಧಿಕ್ಯ

ಶಕಟವದು ಸ್ವರ್ಣಮಯವಾತು ಶೀಲಾದೇವಿ। ಸಕಲ ರತ್ನಾಭರಣದಿಂದ ಪ್ರಜ್ವಲಿಸಿದಳ್। ನಿಖಿಲ ಧನಧಾನ್ಯಮಯವಾಗಿರಲ್ ಗೃಹ ಗೋ ಮಹಿಷಿ ದಾಸಿ ಜನಗಳಿಂದಾ ॥ ಯುಕುತ-ದಿಂದಲಿ ಮನೋಹರ ದೇಹವ್ಯಾತು ಸೇ। ವಕ ಜನರ ಸಮುದಾಯದಿಂದ ಸಾರ್ಥಕಮಾದ। ಪ್ರಕಟದೈಶ್ವರ್ಯವಿಂದೆತ್ತಣೆಂದ್ಯಾತೆನಲು ರಂಜಿಸಿದ ಕೌಂಡಿನ್ಯನೂ ॥ ೧ ॥ ೧೫೩ ॥

ರಾಗ ಪಹಡಿ ಅಷ್ಟತಾಳ

ಕುಂತಿಯಾತ್ಮಜ ಕೇಳಾನಂತನ ವ್ರತ ಫಲಾ। ನಂತ ಸೌಭಾಗ್ಯವು ರಂಜಿಸಿತೂ ॥ ಸಂತಸದಲಿ ಶಕಟವನಿಳಿದಾಗ ಸುಮಂತನ ಜಾಮಾತ ಪೊಕ್ಕನಾಲಯವಾ ॥ ೧ ॥ ಮಾರನ ಪೋಲ್ವ ಕೌಂಡಿನ್ಯ ಶೀಲೆಗೆ ಮಂಗ। ಳಾರತಿ ನಿವಾಳಿಗಳನೂ ॥ ನಾರಿಯರೆಸಗಲುತ್ಸಹದಿ ಗೃಹವ ಪೊಕ್ಕು। ರಾರಾಜಿಸಿದವನತಿತೋರ ಹರ್ಷದಲೀ ॥ ೨ ॥ ವರಶೀಲೆ ರತ್ನಾಭರಣ ದಿವ್ಯ ವಸ್ತ್ರಾಲಂ। ಕಾರದಿ ಶೋಭಿಸಲು ಕಾಣುತಲೇ ಅರಸಿ ತಾನಿವಳಹುದಲ್ಲೆಂಬ ಗುರುತವ। ಮರೆತಂತೆ ಭ್ರಮಿಸುತಾಚ್ಚರಿಪಟ್ಟ ಮನದೊಳು ॥ ೩ ॥ ಎಂತು ಬಂದೊದಗಿತ್ತೈಶ್ವರ್ಯವೆನುತಲಿ ತ। ನ್ನಂತರಂಗದಲಿ ಧ್ಯಾನಿಸಿದಾ ॥ ಸಂತತ ಸಕಲ ಲಕ್ಷಣಯುಕ್ತೆಯಹ ತನ್ನ। ಕಾಂತೆಯಿಂದ-ಲ್ಯಾತೆನುತ ತಿಳಿದನೂ ॥ ೪ ॥ ಧನವಂತನಾದ ಕೌಂಡಿನ್ಯ ಸಕಲ ಜನ। ಜನಿತ ಬಂದೋಲಗಿಸು-

ತ್ತಿಹುದೂ ॥ ಜನಪ ಕೇಳಚ್ಯುತನೊಲುಮೆ ಪಡೆದ ಸಾಧು। ಜನರಿಗಸಾಧ್ಯಮಾವುದು ಜಗದೊಳಗೇ ॥ ೫ ॥ ೧೫೪ ॥

ಕಂದಪದ್ಯ

ಹೀಗಿರುತಿರಲು ವಧುವಿನೆಡೆ। ಭಾಗದ ಬಾಹುವಿನೊಳಿರ್ಪ ದಾರವ ಕಂಡುಂ ॥ ಯೋಗೀಂದ್ರನು ಚಂಚಲ ಮನ। ನಾಗಿ ವಿರಾಗದೊಳು ಸತಿಗೊರೆದ ಖತಿಗೊಂಡುಂ ॥ ೧ ॥ ೧೫೫ ॥

ರಾಗ ಕೇತಾರಗೌಳ ಅಷ್ಟತಾಳ

ನಾರಿ ನೀ ಬಾರಿತ್ತ ತೋಳಿಗೆ ಧರಿಸಿದ। ದಾರವಿದೇನು ಪೇಳೇ ॥ ನೀರೆ ನೀನೆನ್ನನು ಮರುಳುಗೊಳಿಸುವ ವಿ। ಚಾರವಿದೇನೆ ಶೀಲೇ ॥ ೧ ॥ ಈಸು ದಿನವು ತನಗತಿ ಹಿತೆಯೆಂದು ನಾ। ಲೇಸಾಗಿ ನಂಬಿದೆನೂ ॥ ವಶ್ಯಸೂತ್ರವ ಕಟ್ಟಿಕೊಂಡೆನ್ನ ನೀ। ಮೋಸಗೈಯುವೆಯ ಪೇಳೂ ॥ ೨ ॥ ಅರಸ ಕೋಪಿಸಬೇಡ ಲಾಲಿಸೆನಗೆ ನೀನು। ಪರದೈವವೆಂದುಕಾಂಬೇ ॥ ಮರೆವಾನಂತನ ವ್ರತವಾಚರಿಸಿದೆ ದಾರ। ಧರಿಸಿದೆ ತೋಳಿಗಂದೇ ॥ ೩ ॥ ಸತಿ ನೀನಾನಂತನ ವ್ರತವೆಲ್ಲಿ ಮಾಡಿದೆ। ಕೃತಕವ ನುಡಿವೆ ಯಾಕೇ ॥ ಅತಿಚಪಳೇಯು ನಿನ್ನ ಮತಿ ಬೇರಾಗಿದೆಯೆನ್ನ। ಹತವ ಗೈಯುವದ್ಯಾತಕೇ ॥ ೪ ॥ ತಂದೆಯ ಮನೆಯಿಂದ ಬರುತ ನದೀಸ್ನಾನ। ಕೆಂದಿಳಿಯಲು ತೀರದೀ ॥ ಇಂದುಮುಖಿಯರೆಲ್ಲ ರೆಸಗುತಿರಲು ವ್ರತ। ದಂದವ ನಾ ಕೇಳಿದೇ ॥ ೫ ॥ ವರದಂತೆ ವ್ರತವನಾಚರಿಸಿದೆ ದಾರವ। ಧರಿಸಿದೆ ತೋಳಿಗಾಗಾ ॥ ಸಿರಿಯನಂತನು ಕೃಪಾಕರನಾದ ಕಾರಣ। ಸಿರಿತನಗಿತ್ತನೀಗಾ ॥ ೬ ॥ ಕಾಂತ ಲಾಲಿಸು ಶ್ರೀ ಅನಂತನ ದಯದೊಳ। ಧ್ಯಾಂತದೈಶ್ವರ್ಯಗಳೂ ॥ ಬಂತು ಸುಖದಿ ಸಿರಿವಂತರಾದೆವು ಚಿತ್ತ। ಭ್ರಾಂತ ನೀನಾಗದಿರೂ ॥ ೭ ॥ ಸೊಕ್ಕಿದೆ ನೀನೆನ್ನ ಠಕ್ಕಿಪೆ ಯೆನುತಾಗ। ಉಕ್ಕುವ ರೋಷದಲೀ ॥ ಫಕ್ಕನೆ ಬಂದು ಕೈಯಿಕ್ಕುತ ಸೂತ್ರವ। ಮಿಕ್ಕುಹರಿದನಿಂದೂ ॥ ೮ ॥ ತಟ್ಟನೆ ತವಕದಿ ಕಿಚ್ಚಿನೊಳಾ ದಾರ। ವಿಟ್ಟನು ಬೇಗದಲೀ ॥ ಕೆಟ್ಟೆನೆಂದಾ ಶೀಲೆ ತೆಗೆದು ದಾರವ ಹಾಲೊ। ಳಿಟ್ಟಳು ಭಕ್ತಿಯಲೀ ॥ ೯ ॥ ೧೫೬ ॥

ವಾರ್ಧಿಕ್ಯ

ಭೂಪ ಲಾಲಿಪುದು ಕೌಂಡಿನ್ಯನಾ ಸೂತ್ರಮಂ ಕೋಪದಿಂದಗ್ನಿಯೊಳಗಿಡಲಂದಿನಾರಭ್ಯ। ಲೋಪವಾದುದು ಸಕಲ ಸೌಭಾಗ್ಯ ಸಂಪದವು ಸಿರಿ ಮೊಗದಿರುಹಿ ಪೋದಳೂ ॥ ಶ್ರೀಪತಿಯ ಲವಕರುಣವಾಯಿತಿದ್ದಿದ್ದಂತೆ। ಸೋಪಸ್ಕರಗಳೆಲ್ಲ ಕೆಟ್ಟುದುದು ವರ್ಚಸ್ಸ। ರೂಪು ತಲೆಗುಂದಿದುದು ಸಕಲ ಜನರೆಲ್ಲ ದೂಷಿಸಿ ಕಡೆಗೆ ಪಾರಾದರೂ ॥ ೧ ॥

ಕಳವಿನಿಂ ಕಳ್ಳರೊಳಪೊಕ್ಕು ಸರ್ವಸ್ವಮಂ। ಸುಲಿದು ಕೊಂಡಳು ಹೊಲಕೆ ಹೋದ ಗೋವ್ಗಳನೆಲ್ಲ। ಹುಲಿ ಮುರಿದುದೇನೆಂಬೆ ದಾಸೀಜನರ್ಬಿಟ್ಟು ತೊಲಗಿಹೋದರ್ದೂರಕೇ ॥ ಚಲುವ ಮನೆಗಗ್ನಿಪ್ರವೇಶವಾದುದು ಬಳಿಕ। ಕಳವಳಿಸಿ ಕೌಂಡಿನ್ಯ ಕಡುದರಿದ್ರತೆಯಿಂದ। ಬಳಲುತ್ತಲೊಂದು ದಿನ ಕಾಂತೆಯೊಡನಿಂತೆಂದನನುತಾಪಬಡುತಲಂದೂ ॥ ೨ ॥ ೧೫೭ ॥

ರಾಗ ನೀಲಾಂಬರಿ ಜ ಆದಿತಾಳ

ಮಡದಿ ಕೇಳಿ ಮಹದೈಶ್ವರ್ಯ । ಅಡಗಿತೆಂತಾಶ್ಚರ್ಯಾ । ನಡತೆಯೊಳಿನ್ಯಾವ ಲೋಪ। ಅಡಗಿತೆಂತೊ ಪಾಪಾ ॥ ೧ ॥ ಜಲಜನೇತ್ರನ ಧ್ಯಾನಕೆ । ಜಾಡ್ಯವಿಲ್ಲ ಮನಕೇ ॥ ಬಡತನವಿದ್ಯಾಕೆ ಬಂತು । ಕಡೆಯ ಕಾಣೆನಿಂತೂ ॥ ೨ ॥ ಸೃಷ್ಟಿಯೊಳೆಮ್ಮೈಶ್ವರ್ಯಕ್ಕೆ । ಸರಿಯಿಲ್ಲ ಲೋಕಕ್ಕೇ ॥ ಕಷ್ಟವ ಕೊಟ್ಟವನಲ್ಲ । ಕೊಡುವಲ್ಲಿ ಕುಂದಿಲ್ಲಾ ॥ ೩ ॥ ಕೆಟ್ಟಿತ್ಯಾತಕೆಮ್ಮ ಯೋಗ । ಕೇಡಿಲ್ಲದ ಭಾಗ್ಯಾ ॥ ೩ ॥ ಕೆಟ್ಟಿತ್ಯಾತಕೆಮ್ಮ ಯೋಗ । ಕೇಡಿಲ್ಲದ ಭಾಗ್ಯಾ ॥ ಬಟ್ಟಬಯಲಾದ ಪರೀ । ಬಗೆಯಿದೇನೆ ನಾರೀ ॥ ೪ ॥ ತರುಣಿ ಪರಾನಾರಿಯರ್ಗೆ । ಮರುಳಾಗಲಿಲ್ಲಾರ್ಗೇ ॥ ಸರಿಯಿಲ್ಲದಿಹ ದಾರಿದ್ರ್ಯ । ಸೇರಿತೆಂದು ಛಿದ್ರಾ ॥ ೫ ॥ ಗುರು ಹಿರಿಯ ಜನರಿಗೆಲ್ಲ । ಎರಗದಿರಲಿಲ್ಲಾ ॥ ನಿರತ ಕರ್ಮ ನಾನು ಬಿಟ್ಟು । ಇರಲಿಲ್ಲಾ ಕೇಳ್ಗುಟ್ಟೂ ॥ ೬ ॥ ಸ್ನಾನ ಸಂಧ್ಯಾನ ಜಪವು । ವಮೌನ ಮಹಾಕ್ರಿಯೆಯೂ ॥ ಏನು ಲೋಪಗೈಯ್ಯಲಿಲ್ಲ । ಏನೆಂದರಿಯೆನಲ್ಲಾ ॥ ೭ ॥ ಮೌನವ್ಯಾತಕೆನ್ನೊಳ್ಪ್ರಿಯೆ ಮಾನಸದಿ ತಿಳಿಯೇ ॥ ಮಾನಿನೀ ಮಾತನು ಕೇಳೆ । ನೀನರಿತು ಪೇಳೇ ॥ ೮ ॥ ೧೭೮ ॥

ರಾಗ ಆನಂದಭೈರವಿ ಜ ಏಕತಾಳ

ಕಾಂತ ಕೇಳಿಂದೆನ್ನ ಸೊಲ್ಲ । ಅಂತರಂಗ ಶುದ್ಧವಿಲ್ಲ । ತಾಳ್ವೆಯೋ । ಮಾತ । ಕೇಳ್ವೆಯೋ ॥ ೧ ॥ ಶ್ರೀಮದನಂತನ ವ್ರತವು । ನಾ ಮಾಡಲತಿ ಚೋದ್ಯವು । ಸೇರಿತೂ । ಸುಖವು । ದೋರಿತೂ ॥ ೨ ॥ ಎಷ್ಟು ಪೇಳಿದರು ಕೇಳದೆ । ಸಿಟ್ಟಾಗಿ ಸೂತ್ರವ ಹರಿದೆ । ನೋಡದೇ । ನೀಬಿ । ಸಾಡಿದೇ ॥ ೩ ॥ ತಟ್ಟನೇ ಸೂತ್ರವ ತೆಗ । ದಿಟ್ಟೆನು ಕ್ಷೀರದೊಳಾನು । ಇನಿತಾಯ್ತೂ । ಪ್ರಾಣ । ಉಳಿಯಿತೂ ॥ ೪ ॥ ಅಗ್ನಿಯೊಳನಂತ ಸೂತ್ರ । ಭಗ್ನವಾಗಲೆಮ್ಮ ಗಾತ್ರ । ವಿಪ್ಪ್ರದೋ । ಏನೇ । ನಪ್ಪುದೋ ॥ ೫ ॥ ಪ್ರಾಣಮಾತ್ರ ವುಳಿದು ಸರ್ವ । ಹಾನಿಯಾಯಿತೆಮ್ಮ ಗರ್ವಾ । ನಂತನಾ । ಕೇಳ್ನಿ । ಶ್ಚಿಂತನಾ ॥ ೬ ॥ ೧೮೪ ॥

ರಾಗ ಮುಖಾರಿ ಏಕತಾಳ

ನಾರೀ ಮುಂದಿನ್ನೇನೆ ದಾರೀ । ಪೇಳೆ ವಯ್ಯಾರೀ । ನಾರೀ ಮುಂದಿನ್ನೇನೆ ದಾರೀ । ನಿನ್ನಯಮಾತ । ಮೀರುವನಲ್ಲ ಶೃಂಗಾರೀ ಭಾರಿಸಿ ಕೋಪದಿ । ಮೀರಿದು ಕಾರ್ಯ ನಿ । ವಾರಣದಾಗಮ । ತೋರಿಕೊಡೆನಗೇ ॥ ನಾರೀ ॥ ೧ ॥ ಇಂತೆಂದರಿಯದಾದೆನಾಗಾ । ನೀ ಪೇಳೆ ಬೇಗಾ । ನಂತಾ ನಮ್ಮನು ಕ್ಯಾವಂತೀಗಾ । ಉಪಾಯಗಳ । ನುಂ ತನಗಿರುವನುರಾಗಾ । ಸದ್ಯದ ಲೀಗಾ ॥ ನೀಂ ತಿಳಿವುತ ಪೇ । ಳ್ದಂತೆಸಗುವೆ ನಿ । ಶ್ಚಿಂತನ ರೂಪವ । ನೆಂತು ಪಡೆವೆನೇ ॥ ನಾರೀ ॥ ೨ ॥ ನಿನಗಾನಂತನ ದಯವುಂಟೂ । ನಿನ್ನ ಮಿತ್ರತ್ವದಿಂ । ದೆನಗಾ ದೇವನ ಕೃಪೆಯುಂಟೂ । ತೊಲಗಿದೈಶ್ವರ್ಯ । ವನು ನಮಗಾಗುವಂತೇನುಂಟೂ । ಮಾಡುವೆನಂಟೂ ॥ ತನು ಮನಜೀವನ । ವನು ಹರಿಪದಕ । ರ್ಪಣೆಗೈಯುವೆ ತಿಳಿ । ದೆನಗಿದ ಪೇಳೇ ॥ ನಾರೀ ॥ ೩ ॥ ೧೮೭ ॥

ರಾಗ ಕೇತಾರಗೌಳ ಅಷ್ಟತಾಳ

ಅರಸ ಕೇಳಿನ್ಯಾವ ದೇವರಿಂದಲಿ ಪರಿ । ಹರಿಸುವ ಬಗೆಯ ಕಾಣೇ ॥ ಕರುಣಾಕರ ಶ್ರೀಅನಂತನ । ಪಾದವ ಮೊರೆಹೋಗುಬೇಗ ನೀನೇ ॥ ೧ ॥ ನಡೆ ನಿಲ್ಲದಿರು ಜಗದೊಡೆಯನ ಹುಡುಕುತ್ತ । ನಡೆಯಲು ದೊರಕುವನೂ ॥ ಕಡುಕೃಪಾಕರ ನಮ್ಮ ಬಡತನ ಹಿಂಗಿಸು । ತೊಡನೆ ಭಾಗ್ಯವನೀವನೂ ॥ ೨ ॥ ಜನ್ಮ ಸಾರ್ಥಕವು ದುಷ್ಕರ್ಮವು ಪರಿಹಾರ । ಧರ್ಮಸಾಧನವಪ್ಪುದೂ ॥ ನಿರ್ಮಲ ಭಕ್ತಿಯ ಕೂರ್ಮೆಯಿಂದಲಿ ಮುಕ್ತಿ । ವರ್ಮವು ದೊರಕುವದೂ ॥ ೩ ॥ ಕಂಡನಂತನ ಪಾದ ಪುಂಡರೀಕದಿ ತನು । ದಿಂಡುಗೆಡದು ಪ್ರಾರ್ಥಿಸೂ ॥ ಹಿಂಡಿಪಾಪಗಳ ಗೋಳುಂಡೆಯ ದಹಿಸಿ ಅ । ಖಂಡಪದವ ಸಾಧಿಸೂ ॥ ೪ ॥ ಮಾನಸ-ದೊಳಗನುಮಾನವ್ಯಾತಕೆ ಭಕ್ತಾ । ಧೀನ ಕಣಾ ದೀನರ್ಗೇ ॥ ಏನು ಸಂದೇಹವಿಲ್ಲಾತನೊಲಿಯೆ ಸರ್ವಾ । ಧೀನವಪ್ಪುದು ಜಗದೀ ॥ ೫ ॥ ೧೯೨ ॥

ಕಂದಪದ್ಯ

ಭೂಪತಿ ಲಾಲಿಸು ಮುದದಿಂ । ದಾ ಪತಿಹಿತೆ ಪೇಳೆ ಕೇಳಿ ಹರುಷವ ತಾಳ್ದಂ ॥ ತಾಪಸವರ ಕೌಂಡಿನ್ಯಂ । ತಾ ಪೊರಮಡಲನಂತನನು ಕಾಂಬುತ್ಸವದಿಂ ॥ ೧ ॥ ೧೯೩ ॥

ರಾಗ ಕಾಂಬೋಧಿ ಝುಂಪೆತಾಳ

ಕಡುಭಕ್ತಿಯಿಂದ ಕೌಂಡಿನ್ಯನೇಕೋದ್ಯಢದಿ । ನಡೆದನುತ್ತರಕಾಗಿ ಮುಂದೇ ॥ ಅಡವಿಯನು ಕಳೆದು ಬರುತಿರಲೊಂದು ಚೂತತರು । ಸಡಗರದಿ ಮೆರೆದುದೇನೆಂಬೇ ॥ ೧ ॥ ಬಿಡದರ್ಧಕ್ರೋಶ ವಿಸ್ತೀರ್ಣ ಛಾಯದಿ ತಂಪು । ವಡದಿರಲು ಕಾಣುತದರಲ್ಲೀ ॥ ಬುಡವಿಡಿದು ಕಡೆತನಕನೇಕಫಲ ಪಕ್ಷದಿಂ । ತುಡುಕಿ ಜೋಲುತ್ತಿಹುದು ಝಲ್ಲೀ ॥ ೨ ॥ ಮಂಡಿಸುವ ಛಾಯದಾಶ್ರಯದ ಜಂತುಗಳಿಲ್ಲ । ಹಿಂಡುಫಲ ತಿಂಬ ಜನರಿಲ್ಲಾ ॥ ಹಿಂಡೆದ್ದ ಫಲರಸವ ಪೀರ್ವ ವಿಹಗಗಳಿಲ್ಲ । ಶೌಂಡನಂತಿರೆ ನೋಡಲೆಲ್ಲಾ ॥ ೩ ॥ ಕಂಡು ಕೇಳಿದ ಮಹಾವೃಕ್ಷವೆ ಅನಂತನನು । ಕಂಡುದುಂಟೇ ತಿಳುಹಿಸೆನಲೂ ॥ ಕಂಡರಿಯೆನೆಂದು ನುಡಿಯಾಗಿ ಲಾಲಿಸುತ ನಡೆ । ಗೊಂಡು ದ್ವಿಜ ಮುಂದಕೈತರಲೂ ॥ ೪ ॥ ಧೇನು ವೊಂದಿರಲದರ ವತ್ಸ ಕ್ಷೀರವನುಣ್ಣ । ದಾನಿಸುವಡಚ್ಚ ಕೆಚ್ಚಲಿಗೇ ॥ ಏನು ಹಾಲಿಲ್ಲದಿರೆ ಕ್ಷುದ್ಬಾಧೆಯಿಂದ ಕರು । ತಾನೆ ಮಿಡುಕುವದು ತನ್ನೊಳಗೇ ॥ ೫ ॥ ಮೌನಿ ಕೇಳಿದನನಂತನ ಕಂಡುದುಂಟೆಯೆನ । ಲಾನರಿಯೆನೆಂದು ನುಡಿಯಾಗೇ ॥ ಮಾನಸದಿ ಚಿಂತಿಸುತ ಮುಂದಕ್ಕೆ ತರುತೀರ್ದ । ನಾನಂದವಡಿಗೆ ಬೆರಗಾಗೇ ॥ ೬ ॥ ೧೯೯ ॥

ರಾಗ ಆಹೇರಿ ಝುಂಪೆತಾಳ

ಚಿಂತಿಸುತ ಬಂದ ಕೌಂಡಿನ್ಯಾ । ಶ್ರೀಅ । ನಂತನನು ಕಾಂಬ ಕಡು ತವಕದಲಿ ಧನ್ಯಾ ॥ ಚಿಂತಿಸುತ ॥ ಪಲ್ಲ ॥ ಎರಡು ಪುಷ್ಕರಣಿಯೊಂದರ ನೀರು ವೊಂದಕ್ಕೆ । ಸರಿ ಬೆರಕೆಯಾಗಿರುವ-ದಲ್ಲದನ್ಯತ್ರ ಜೀ । ವರು ಹೊದ್ದದಿಹರದರ ಕಾಣುತ್ತ ಮುಂದಕ್ಕೆ । ಸರಿದನತಿ ಚಿಂತಿಸುತಲಾಗಾ ।

Scanned by CamScanner

ಮೆರೆವ ವೃಷಭವ ಕಂಡು ನುಡಿಸುತ್ತಲತಿ ಶ್ರಮದ । ಭರದಿ ಮೂರ್ಛಿಸಿ ಬಳಿಕ ಮದಗಜವ ಕಂಡೊಂದು । ಖರನ ಕಾಣುತ ನಡೆಯೆ ಸೊರಗಿ ಕುಳಿರುತ ಜಗ । ದ್ಭರಿತನಂತನೆ ಕಾಯೊ ಯೆನುತಾ । ಮನದಿ । ಸ್ಮರಿಸಿದನು ದೇವನೇ ನೀನೆ ಗತಿ ಯೆನುತಾ ॥ ಚಿಂತಿಸುತ ॥ ೧ ॥ ನಡೆಯಲಾರನು ಮುಂದೆ ನಡುಗಿದವು ಕೈಕಾಲು । ವಡಲು ಬತ್ತಿತು ಗಂಟಲೆಡೆಯಾರಲೋರ್ವ ದ್ವಿಜ । ನಡೆತಂದ ನಾತನೀರ್ದೆಡೆಗೆ ಕಾಣುತ್ತಲಡ । ಗೆಡದ ಮೌನಿಯನು ಕಂಡೂ ॥ ಹಿಡಿದೆತ್ತಿ ಕುಳ್ಳಿರಿಸಿ ಬೆದರಬೇಡೆನುತ ಮೈ । ದಡವಿ ನೀ ಬಂದುದ್ಯಾಕೆನುತ ಕೇಳಲು ಧೈರ್ಯ । ವಿಡಿದ. ನಂತನ ಕಾಣಲ್ಕೆ ತಂದೆನೀಗಳೀ । ಯೆಡೆಯೊಳಿರ್ದರೆ ತೋರಿಸೆನಲೂ । ಕೈ । ಗೊಡುತ ವಿಪ್ರಗೆ ದ್ವಿಜನು ಸಹಿತ ನಡೆತರಲೂ ॥ ಚಿಂತಿಸುತ ॥ ೨ ॥ ಚಲುವ ವೃದ್ಧ ದ್ವಿಜನು ಕೌಂಡಿನ್ಯ ಮುನಿಯ ಕರ । ತಳವಿಡಿವುತೊಂದು ಗುಹೆಯನು ಪೊಗಿಸುತಲಿನಡೆಯೆ । ವಳ ಪೊಕ್ಕರೇನೆಂಬೆ ಕೋಟಿ ಭಾಸ್ಕರ ತೇಜ । ಬೆಳಗಿನ ಕವಾಟ ತೆರದಂತೇ ॥ ಥಳಥಳಿಸುತಿರುವ ತೇಜೋಪುಂಜ ವೈಕುಂಠ । ನಿಳಯಮದು ಕಣ್ಗೆ ಗೋಚರಮಾಗಲಾಶ್ಚರ್ಯ । ಗೊಳುತ ಪರವಶನಾಗುತಾನಂದ ಬಾಷ್ಪಗಳ । ಪುಳಕಾಂಕುರದಲಿ ಮೈನೆನದಾ । ಹರುಷ । ಗೊಳುತಾಗ ಕಂಡನಂತನಿಗೆ ಕೈಮುಗಿದಾ ॥ ಚಿಂಸುತ ॥ ೩ ॥ ೨೦೨ ॥

ರಾಗ ಭೈರವಿ ಅಷ್ಟತಾಳ

ಕಂಡನಾಗಾ । ಮುನಿಪತಿ । ಕಂಡನಾಗಾ ॥ ಪಲ್ಲ ॥ ಕಂಡನಾಗಲಖಂಡತೇಜದ । ಪುಂಡರೀಕ ದಳಾಕ್ಷನಿರವನು ॥ ಕಂಡನಾಗ ॥ ಅನುಪಲ್ಲ ॥ ಮೃಡ ಸರೋಜಜ ಮುಖ್ಯ ಸುರವರು ಗಡಣ ವೋಲೈಸುತ್ತಿರಲುಬಲ । ನೆಡನ ತುಂಬುರ ನಾರದಾದ್ಯರು ಬಿಡದೆ ಕೀರ್ತಿಸುತಿರಲು ದೇವಿಯ । ರಡಿಗಳೊತ್ತುತಲಿರಲು ಕಂಬಿಯ । ಹಿಡಿದು ಚೆಂದದಿ ಸೇವಿಸಲು ಮಹ । ಸಡಗರದ ಸಂಭ್ರಮದ ಸಪ್ತಕ । ಹೆಡೆಯನಂತರ ಮೇಲೊರಗಿದನ ॥ ಕಂಡನಾಗಾ ॥ ೧ ॥ ಚರಣನೂಪುರ ಪಿಂಡೆ ಪೀತಾಂ ॥ ಬರದ ಕಟದುಡು ನೇವಳದ ಸುರು । ಚಿರದ ಕಾಂಚೀದಾಮ ನಾಭಿ । ಸರಸಿರುಹ ಜಗದುದರ ತ್ರಿವಳಿಯ । ಕರ ಚತುಷ್ಟಯ ಶಂಖ ಚಕ್ರಾಂ । ಬುರುಹ ಗದೆ ಮರಕತದ ಶಿಲೆಗಳ । ಮೆರೆವಬುಜ ಕೀರ್ತಿಗಳು ಬಲು ಶ್ರಂ । ಗರದೊಳಿಹ ಶ್ರೀವರನ ಮೂರ್ತಿಯ ॥ ಕಂಡ-ನಾಗಾ ॥ ೨ ॥ ಹಾರ ಮಣಿ ಕೇಯೂರ ವರ ಶೃಂಗಾರ ವನಮಾಲೆಯ ತುಳಸಿ ಗಂಭೀರ ಶ್ರೀವತ್ಸಾಂಕ ಕೌಸ್ತುಭ । ಧಾರ ವಕ್ಷದನುಣ್ಗೊರಳ ಶ್ರೀ । ಕಾರ ಮೂರೇಖೆಗಳ ಚುಬುಕದ । ಚಾರು ಬಿಂಬಾಧರದ ರದನಗ । ಳೋರಣದ ದರ ಹಸಿತ ಮುಖ ದಯ । ಸಾರ ಸುಜನೋದ್ಧಾರ ಮೂರ್ತಿಯ ॥ ಕಂಡನಾಗಾ ॥ ೩ ॥ ಥಳಥಳಿಸುತಿಹ ಗಂಡಮಂಡಲ । ಗಳಲಿ ನರ್ತಿಪ ಮಕರಕುಂಡಲ । ಗಳ ಸುನಾಸದ ವರಕಪೋಲದ । ನಳಿನದಳ ನೇತ್ರಗಳ ಭ್ರೂಲತೆ । ಗಳ ನೊಸಲ ಕಸ್ತೂರಿತಿಲಕದ । ಚಳಕದಾ ಶಿರಿಮುಡಿಯ ರತ್ನ । ಜ್ವಲಿತ ಮಕುಟದ ಮಸ್ತಕದ ಶ್ರೀ । ನಿಲಯ ಭರಿತದಿ ಮೆರೆವ ಮೂರ್ತಿಯ ॥ ಕಂಡನಾಗಾ ॥ ೪ ॥ ೨೦೬ ॥

ವಾರ್ಧಿಕ್ಯ

ನೀಲಮೇಘನಿಭಾಂಗನಂ ಕೃಪಾಪಾಂಗನಂ । ಕಾಲ ಕರ್ಮವಿದೂರನಂ ಸದ್ವಿಚಾರನಂ । ಶೀಲ ಸತ್ಯಸುಸಂಧನಂ ಜಗದ್ವಂದ್ಯನಂ ದೇವದೇವಾಧೀಶನಂ ॥ ಖೂಳ ದಾನವ ಕಾಲನಂ ಭಕ್ತಲೋಲನಂ । ಪಾಲಿತಾಖಿಳಭರಿತನಂ ಬಹಳ ಚರಿತನಂ । ಶ್ರೀಲತಾಂಗಿಯ ಕಾಂತನಂ ಶ್ರೀ ಅನಂತನಂ ಕಂಡನಾ ಕೌಂಡಿನ್ಯನೂ ॥ ೧ ॥

ಕಂಡು ಕೌಂಡಿನ್ಯನತಿ ಭಯಭರಿತ ಭಕ್ತಿಯಿಂ । ದಂಡಪ್ರಣಾಮಂಗಳಂ ಮಾಡುತೆದ್ದು ಕರ । ಪುಂಡರೀಕವ ಮುಕುಳಿತವಗೈದು ಪರವಶದಿ ಮಂಡೆಯೊಳ್ ಪೊತ್ತು ಮುದದೀ ॥ ತಾಂಡವಾಡುತ್ತಲಡಿಗಡಿಗೆ ತನುಪುಳಕರಸ । ಬೆಂಡೆದ್ದು ಬೆರಗಾಗಿ ಶ್ರೀ ಮಹಾನಂತನಂ । ಕಂಡು ಗದ್ಗದಸ್ವರದಿ ಕೊಂಡಾಡುತಡಿಗಡಿಗೆ ನುತಿಸಿದಂ ಮತಿಯುಕ್ತದೀ ॥ ೨ ॥

ಜಯ ಜಯಾಚ್ಯುತನಂತ ಜಯತು ಧುರಿತಧ್ವಾಂತ । ಜಯ ರಮಾಕಾಂತ ಜಯಜಯ ನಿತ್ಯ ನಿಶ್ಚಿಂತ । ಜಯ ವೇದವೇದಾಂತ ಜಯಜಯತು ಭಗವಂತ ಜಯತು ವೈಕುಂಠ ಶಾಂತಾ ॥ ಜಯ ಜಯತು ಜಗದೀಶ ಜಯ ದೀನ ಜನಪೋಷ । ಜಯ ಕಿಲ್ಬಿಷವಿನಾಶ ಜಯ ವಿಶ್ವ ವಿಶ್ವೇಶ । ಜಯತು ಮಣಿಗಣಭೂಷ ಜಯತು ಮಂಜುಳವೇಶ ಜಯತು ಜಯ ಜಯ ವೆಂದನೂ ॥ ೩ ॥ ೨೦೯ ॥

ರಾಗ ನೀಲಾಂಬರಿ ರೂಪಕತಾಳ

ಅಪರಾಧಿಯು ನಾ ದೇವನೆ । ಅಪರಾಧವ ಕ್ಷಮೆಗೈವುತ । ಕೃಪೆಯಿಂದೆನ್ನನು ರಕ್ಷಿಸು । ದ್ವಿಪರಾಜವರದನೇ ॥ ಅಪರಾಧಿಯು ॥ ಪಲ್ಲ ॥ ನಿತ್ಯ ತೃಪ್ತನೆ ವ್ಯಕ್ತಾ । ವ್ಯಕ್ತ ನಮೋ ನಾರಾಯಣ । ಸತ್ಯ ಸುಸಾಕ್ಷಿಯೆ ಸುರ ಸ । ರ್ವೋತ್ತಮ ಸರ್ವೇಶಾ ॥ ಭಕ್ತಪ್ರಿಯ ಭವಭಂಜನ । ತತ್ವಾಸಕ್ತ ಜನಾರ್ದನ । ಮುಕ್ತಿಪ್ರದ ಮುರಹರ ಜಗ । ಸೂತ್ರಿಕ ಚಿನ್ಮಯನೇ ॥ ಅಪರಾಧಿಯು ॥ ೧ ॥ ಕಾಂತೆಯು ನಿನ್ನಯ ವ್ರತವನು । ಸಂತಸದಲಿ ಮಾಡಲ್ಕ । ತ್ಯಂತದ ಮಹ ಸಿರಿಯೊಳು ನಿಶ್ಚಿಂತೆಯೊಳಿರುತೀರ್ದೇ ॥ ಅಂತರವರಿಯದೆ ದಾರವ । ತಾಂ ತವಕದಿ ಹರಿಯಲು ಶಿರಿ । ಯಂತರಿಸಿತು ದಾರಿದ್ರ್ಯವು ಬಂತೆಲೊ ನಿರುಪಮನೇ ॥ ಅಪರಾಧಿಯು ॥ ೨ ॥ ತರುಣಿಯು ಪೇಳಲು ನಿನ್ನುವ । ನರಸುತ ಬಂದೆನು ತವ ಪದ । ದರುಶನವಾಯಿತು ಬದುಕಿದೆ । ಹರಿ ನಿನ್ನನು ಕಂಡೇ ॥ ಕರುಣಾರ್ಣವನೆನ್ನನ್ನು । ದ್ಧರಿಸುತ ದಾರಿದ್ರ್ಯವ ಪರಿ । ಹರಿಸೈ ಭಾಗ್ಯವ ಪಾಲಿಸು । ಪರದಲಿ ಮುಕ್ತಿಯನೂ ॥ ಅಪರಾಧಿಯು ॥ ೩ ॥ ೨೧೨ ॥

ರಾಗ ಕೇತಾರಗೌಳ ಅಷ್ಟತಾಳ

ಅತಿಭಯಭರಿತ ಭಕುತಿಯಿಂದ ತ್ರಿಕರಣಾ । ರ್ಪಿತಗೈದು ಕೌಂಡಿನ್ಯನೂ ॥ ನುತಿಸುತಿರಲು ದಂತದ್ಯುತಿಯ ಬೆಳಗುತಲ । ಚ್ಯುತನೊಲಿದಿಂತೆಂದನೂ ॥ ೧ ॥ ಬುಧಶಿರೋಮಣಿ ನಿಚ್ಚಟದ ಭಕ್ತಿಗಾನು ಮೆ । ಚ್ಚಿದೆನಂಜಬೇಡವಿನ್ನೂ ॥ ಚೆದುರೆಯಾಗಿಹ ನಿನ್ನ ಸುದತಿಯಿಂಗಿತವರಿ । ಯದೆ ಕೆಟ್ಟೆ ಬರಿದೆ ನೀನೂ ॥ ೨ ॥ ಚಿಂತಿತಪ್ರದ ಶ್ರೀ ಅನಂತನ ವ್ರತವನ್ನು । ಕಾಂತಾಮಣಿಯು ಮಾಡಲೂ ॥ ಅಂತವಿಲ್ಲದ ಭಾಗ್ಯವಂತನೆನಿಸಲು ಮ । ದಾಂತನಾದೆಯ ನೀ ಕೇಳೊ ॥ ೩ ॥ ಸಲೆ ಪತಿವ್ರತೆ ನಿನ್ನ ಚೆಲುವ ಸುದತಿಯೊಳು । ಸಲೆ ಕೋಪಿಸಿದೆ ಬರಿದೇ ॥ ಮುಳಿದು ದಾರವ

Scanned by CamScanner

ಹರಿಯಲು ಸಕಲೈಶ್ವರ್ಯ । ತೊಲಗಿದುದಾಕ್ಷಣವೇ ॥ ೪ ॥ ಉರಿಯೊಳಿಟ್ಟಾ ಸೂತ್ರ ತೆಗದಧ
ಹಾಲೊಳ । ಗಿರಿಸಿದ ಕಾರಣದೀ ॥ ಧರೆಯೊಳೀರ್ವರ ಕಳೇವರ ವುಳಿಯಿತು ನಿನ್ನ । ತರುಣ
ಸುಲಕ್ಷಣದೀ ॥ ೫ ॥ ಸತಿಯ ವಾಕ್ಯವನು ಸಾಧಿಸಿ ಬಂದೆನ್ನನು ಕಂಡೆ । ಮತಿಯುತ ನೀ
ಧರೆಗೇ ॥ ಕ್ಷಿತಿಯೊಳು ಸಾಧು ಭಕತರಿಗೇ ಭಯವಿಲ್ಲ । ವತಿ ಮೆಚ್ಚಿದೆನು ನಿನಗೇ ॥ ೬ ॥
ಸತಿಸಹಾನಂತನ ವ್ರತವ ರಚಿಸು ಪೋಗು । ಹಿತದಿ ನಿನ್ನಾಶ್ರಮಕೇ ॥ ಜತೆಯಗಲಿದ ಸಿರಿ
ಶತಮಡಿಯಾಗಿನಿ । ಶ್ಚಿತದಲಹುದು ದಿಟಕೇ ॥ ೭ ॥ ೨೧೯ ॥

ರಾಗ ಘಂಟಾರವ ಆದಿತಾಳ

ತಾಪರಹಿತನ ಸದ್ವ್ರತಕೇ । ಉ । ದ್ಯಾಪನೆ ಮಾಡಬೇಕದಕೇ ॥ ಸೋಪಸ್ಕರ ಮಧ್ಯದಲೀ ।
ಅಂ । ತ್ಯಾ ಪರಿಮಿತ ಕಾಲದಲೀ ॥ ೧ ॥ ಪದಿನಾಲ್ಕಬುದಗಳೊಳಗೇ ॥ ಮಾ ॥ ಳ್ಪದು
ವುದ್ಯಾಪನವು ಮಿಗೇ ॥ ಕದಡುವ ಲೋಪರಹಿತದೀ । ವಿಧ । ವಿಧ ತಪ್ಪದೆ ಸತ್ಕೃತದೀ ॥ ೨ ॥
ಪತಿ ಸತಿಯೊಮ್ಮನಸಿನಲೀ । ಮು । ದ್ವ್ರತವನೆಸಗಿ ಭಕುತಿಯಲೀ ॥ ಅತುಲಿತ ಸಿರಿ
ನಿಮಗಹುದೂ । ಪರ । ಗತಿ ಮುಕ್ತಿಯು ದೊರಕುವದೂ ॥ ೩ ॥ ಕಷ್ಟದಿ ಬಂದೆನ್ನ ಕಂಡೇ ।
ಬೇಡು । ಕೊಟ್ಟಪೆ ವರಗಳನಿಂದೇ ॥ ಸೃಷ್ಟಿಯೊಳೆನ್ನ ದರ್ಶನವೂ । ಬರಿ । ಬಿಟ್ಟಯಾಗದು
ಶ್ರುತಿ ಮತವೂ ॥ ೪ ॥ ಅನುಮಾನಿಸದೇ ವರವಾ । ನಾ । ನಿನಗಿತ್ತೆನು ನಿಶ್ಚಿತವಾ ॥
ಎನಲಾನಂತನು ಕೇಳೀ । ವಂ । ದನೆಗೈದನು ಮುದ ತಾಳೀ ॥ ೫ ॥ ೨೨೪ ॥

ರಾಗ ಶಂಕರಾಭರಣ ಏಕತಾಳ

ಚಿತ್ತವಿಸು ದೇವಾನಂತ । ವ್ರತ ಕಥೆಯನುಸುರಿ ದರ್ಶನ । ವಿತ್ತೆನಗುದ್ಧರಿಸಿದಾ ಚ ।
ರಿತ್ರಗಳ ಸದಾ ॥ ೧ ॥ ಭಕ್ತಿಲೀ ಬರೆದೋದಿ ಕೇಳಿ । ದುತ್ತಮರ ಮನದಿಷ್ಟಾರ್ಥ । ವಿತ್ತು ಇಹದಲ್ಲಿ
ಪರದಿ । ಮುಕ್ತಿಯಿವುದೂ ॥ ೨ ॥ ಪರಹಿತವ ಪೇಳ್ದೆ ಕೊಟ್ಟೆ । ವರವ ನಿನ್ನಾಶ್ರಮಕೆ ಬೇಗ ।
ತೆರಳು ಸುಖದಿಂದ ನೀನೆನ । ಲೆರಗಿ ಪೇಳ್ದನೂ ॥ ೩ ॥ ಬರುತ ಪಂಥದಲ್ಲಿ ಚೂತ ।
ತರುವಿರಲದಕ್ಕೆ ಫಲ । ಭರಿತವಾಗಿಹುದುಣ್ಣುವಾ । ನರರ ಕಾಣೆನೂ ॥ ೪ ॥ ತುರು ಕರುವ
ಕಂಡೆ ಕ್ಷೀರ । ಬರತು ಬತ್ತಿಹುದು ವತ್ಸ । ನುರವಣಿಸುವದುಣ್ಣುವರೆ । ಬರಿದೆ ಮಿಡುಕುತಾ
॥ ೫ ॥ ಎರಡು ಪುಷ್ಕರಣಿಯ ನೀರು । ಸರಿ ಬೆರಕೆಯಾಗಿರ್ಪುದ । ನ್ಯರು ಸೇವಿಪರಿಲ್ಲ ದೇವ ।
ಪರಿಯನು ಕಾಣೇ ॥ ೬ ॥ ಬರುತ ಮುಂದೆ ಚಲುವ ವೃಷಭೇ । ಶ್ವರನ ಕಂಡೆನೊಂದು ಮದ ।
ಕರಿಯ ಕಂಡೆ ಗಾರ್ಧಪಾ ತಾ । ನಿರಲು ಕಂಡೆನೂ ॥ ೭ ॥ ಪರಿಶ್ರಮದಿಂದ ಮೂರ್ಛೆಯಾ ।
ಗಿರಲು ವೃದ್ಧವಿಪ್ರನೋರ್ವ । ಬರುತೆನ್ನನೆಬ್ಬಿಸುತಲಿಲ್ಲಿ । ಕರತಂದ ದೇವಾ ॥ ೮ ॥ ಫಲ
ಬಾರದ ಚೂತವೃಕ್ಷ । ವೆಳೆಗರು ಧೇನು ಪುಷ್ಕರಣಿ ।ಗಳು ವೃಷಭ ಗಜ ಗಾರ್ಧಪ । ರುಲುಹ
ಕಂಡೆನೊ ॥ ೯ ॥ ಚೆಲುವ ವಿಪ್ರರಿವರ್ಯಾರೆಂದು । ತಿಳುಹಬೇಕೆನುತ್ತ ಪಾದ । ನಳಿನಕೆರಗಲಿಂತೆಂದು
ಶ್ರೀ । ನಿಳೆಯ ಪೇಳ್ದನೂ ॥ ೧೦ ॥ ೨೩೪ ॥

ರಾಗ ವರಾಳಿ ಅಷ್ಟತಾಳ

ಧರಣಿಸುರನೆ ಕೇಳು ಚೂತವೃಕ್ಷವೆ ವಿದ್ಯಾ । ಭರಿತ ಪಂಡಿತ ದ್ವಿಜೋತ್ತಮನೂ । ಪರರಿಗೆ
ವಿದ್ಯವ ಪೇಳದಕಾರಣ । ಕರಿಕೋಷ್ಮ ಫಲಗಳೆಲ್ಲೈತೂ ॥ ೧ ॥ ಕೆಟ್ಟ ಭೂಮಿಯ ದಾನಕೊಟ್ಟ
ಕಾರಣದಿಂದ । ತುಟ್ಟಿಸಿದುದು ತುರುವಿಂಗೇ ॥ ಭ್ರಷ್ಟಭೂವರನೆ ತಾ ಕರುವಾಗಿ ಬಳಲುವ ।
ಸೃಷ್ಟಿಯೆ ಗೋ ರೂಪವೈತೂ ॥ ೨ ॥ ಎರಡು ಪುಷ್ಕರಣಿಯೊಂದರ ನೀರ್ತಮ್ಮೊಳ್ತಾವು ತಿರುಗಿಸಿ,
ಕೊಡುವರ್ದಾನವನೂ ॥ ಪರರಿಗೀಯದ ಲೋಭ ಗುಣದಿಂದಲಾ ನೀರು । ಪರರೊಬ್ಬ-
ಭೋಗಿಪರಿಲ್ಲಾ ॥ ೩ ॥ ವದಗುವ ಧರ್ಮವೆ ವೃಷಭವು ಐಶ್ವರ್ಯ । ಮದವೆ ಕಂಡಿಹ
ಮದಗಜವೂ ॥ ಕದುಕಿದ ನಿನ್ನಯ ಕೋಪವೆ ಖರನದು । ಇದು ತಿಳಿವುದು ಸದ್ವಿವರವೂ ॥ ೪ ॥
ಕಡೆಗೆ ನೀ ಕಂಡ ದ್ವಿಜೋತ್ತಮ ನಾನೆ ನಿ । ನ್ನಡೆಗೆ ಬಂದೆನು ಕಾಯಲೆನುತಾ ॥ ನಡೆ
ನಿನ್ನಾಶ್ರಮಕೀಗ ದೃಢದಿ ವ್ರತವ ಮಾಡು । ಮಡದಿ ಸಹಿತ ಸುಖವಿಹುದೂ ॥ ೫ ॥ ೨೩೯ ॥

ವಾರ್ಧಿಕ್ಯ

ಭೂಪ ಕೇಳಿಂತನಂತನು ನಿರೂಪಿಸೆ ಕೇಳು । ತಾ ಪುಣ್ಯ ನಿಧಿಯಾಹ ಕೌಂಡಿನ್ಯ ಹರಿಪದಕೆ ।
ತಾ ಪೊಡಮಡುತ್ತಲತಿ ಭಕ್ತಿಯಿಂದಪ್ಪಣೆಯಗೊಂಡು ಪೊರಮಡುತ ಬಂದೂ ॥
ತಾಪೊಕ್ಕನಾಶ್ರಮಕೆ ಪರಮಹರುಷದಲಿ ಬಳಿ । ಕಾ ಪತಿವ್ರತೆ ಶೀಲೆಗಿದನರುಹಿ ನಿರ್ಮಲದಿ ।
ಶ್ರೀಪತಿಯನಂತನ ವ್ರತವಗೈದು ಸುಖದಿ ಮಹದೈಶ್ವರ್ಯಮಂ ಪಡೆದರೂ ॥ ೧ ॥ ೨೪೦ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತನಂತವ್ರತಾಗಮವ ಭೂ । ಕಾಂತಗರುಹುತ ದ್ರುಪದತನುಜೆಯ । ಸಂತವಿಸಿ ದ್ವಾರಕೆಗೆ
ತೆರಳಿದ । ಕಂತು ಜನಕಾ ॥ ೧ ॥ ವರಸುಭದ್ರೆಯ ಪಂಚಕೈಕೆಯ । ತರಳರಭಿಮನ್ಯುವಿನ
ಸಹಿತಲೆ । ಕರದುಕೊಂಡೈದಿದನು ದ್ವಾರಕ । ಪುರಕೆ ಹರಿಯೂ ॥ ೨ ॥ ಇತ್ತಲರಸನು ಸಹಿತಲತಿ
ದೃಢ । ಭಕ್ತಿಯಿಂದಲನಂತ ವ್ರತವನು । ಚಿತ್ತಶುದ್ಧದಿ ರಚಿಸಿದನು ವಿಧಿ । ಯುಕ್ತವಾಗೀ ॥ ೩ ॥
ವರುಷ ಹನ್ನೆರಡೀರ್ದರಣ್ಯವ । ಚರಿಸಿ ಬಳಿಕ ವಿರಾಟನಲಿ ಹೊ । ಕ್ಕರಿಯದಂದದೊಳೊಂದು
ವರುಷವ । ಕಳೆದರಲ್ಲೀ ॥ ೪ ॥ ತರುಣಿ ದ್ರುಪದಾತ್ಮಜೆಯ ಸೋಂಕಲು । ದುರುಳ ಕೀಚಕನನ್ನು
ನಿಶಿಯೊಳು । ಮರುತಸುತ ವಧಿಸಿದನು ವರ ಸೋ । ದರರು ಸಹಿತಾ ॥ ೫ ॥ ಧೂರ್ತ ಕೌರವ
ಗೋವ ತಡೆಯ । ಲ್ಯುತ್ತರನ ಸೂತತ್ವದೊಳಗೆ ಸ । ಮಸ್ತ ಸೇನೆಯ ಗೆಲಿದನರ್ಜುನ । ನಿತ್ತು
ರಣದೀ ॥ ೬ ॥ ಅರಿತನಾಗ ವಿರಾಟ ಕುಂತೀ । ತರುಣರಿವರೆಂಬುದನು ಕಾಣಿಕೆ । ಯಿರಿಸಿ
ನಮಿಸಲು ಕಂಡು ತೋರ್ದರು । ಕರುಣವನ್ನೂ ॥ ೭ ॥ ಹರಿಯ ಕರಸುತ ಪಾರ್ಥಸುತಗು ।
ತ್ತರೆಯ ಪರಿಣಯಗೈದು ಸಂಧಿಗೆ । ದುರುಳ ಕೌರವನಲ್ಲಿಗೈದಿದ । ಪರಮಪುರುಷಾ ॥ ೮ ॥
ಸಂಧಿ ಮುರಿಯಲು ರಣದಿ ಗಂಗಾ । ನಂದನನ ಕಲಶಜನ ಕರ್ಣನ । ಕೊಂದನರ್ಜುನ
ಸಾರಥಿಯ ಬಲ । ದಿಂದ ಸೇನಸೀ ॥ ೯ ॥ ಮಡಿಯೆ ಶಲ್ಯನು ಭೂಪ ನೀರೊಳ ।
ಗಡಗಿರಲ್ಕೆಬ್ಬಿಸುತ ಗದೆಯಿಂ । ಹೊಡೆದು ತೊಡೆಯನು ಕಡಿದು ಬಿಸುಟನು ಬಿಡದೆ ಭೀಮ

Scanned by CamScanner

॥ ೧೦ ॥ ಸೃಷ್ಟಿಭಾರವನಿಳುಹಿ ಶ್ರೀ ಪರ । ಮೇಷ್ಠಿ ಜನಕನು ಸಹಿತ ಹಸ್ತಿನ । ಪಟ್ಟವನು ಧರ್ಮಜಗೆ ಕಟ್ಟಿದ । ಮುಟ್ಟಿ ದಯದೀ ॥ ೧೧ ॥ ೨೫೧ ॥

ವಾರ್ಧಿಕ್ಯ

ಕೇಳಿದಿರೆ ಮುನಿಗಳಾನಂತನ ವ್ರತದಿ ಭೂ । ಪಾಲ ಧರ್ಮಜನಖಿಳ ಶತ್ರುಗಳನುಂ ಜೈಸಿ । ಪೀಳಿಗೆಯ ಹಸ್ತಿನಾವತಿಯ ಸಿಂಹಾಸನವನೇರಿ ಪೃಥ್ವೀತಳವನೂ ॥ ಪಾಲಿಸಿದ ಸೋದರರನೊಡ. ಗೂಡಿ ಸಂತೋಷ । ದೇಳಿಗೆಯ ಸಂಭ್ರಮೋತ್ಸಹದ ವಿಭವದಿ ರಮಾ । ಲೋಲ ಶ್ರೀ ಕೃಷ್ಣನೊಲಿದರ್ಗ ಸಾಧ್ಯಮದಾವುದಿಲ್ಲೆಂದನಾ ಸೂತನೂ ॥ ೧ ॥

ಇದು ಮಹಾಭಾರತ ಕಥಾಸಾರ ಪಾಂಡವರ । ಮುದದ ಚಾರಿತ್ರ ಭವಿಷ್ಯೋತ್ತರ ಪುರಾಣ ಶುಭ । ದುದಯವಾನಂತ ವ್ರತದಾಗಮವ ಭಕ್ತಿಯಿಂ ಬರೆದೋದಿ ಕೇಳ್ದರಿಂಗೇ ॥ ಅಧಿಕ ತರಮಾಯುರಾರೋಗ್ಯ ಸಕಲೈಶ್ಚರ್ಯ । ಪದವಿಹದಿ ಪರದಿ ಶ್ರೀ ಕೃಷ್ಣನುರೆ ಸಾಯುಜ್ಯ । ಪದವಿತ್ತು ಪೊರೆವ ಮೂಲಿಕೆವಾಸ ನರಸಿಂಹ ಗುರು ವೆಂಕಟೇಶ ದಯದೀ ॥ ೨ ॥ ೨೫೩ ॥

ಮಂಗಲಪದ

ರಾಗ ಅಠಾಣ ಅಷ್ಟತಾಳ

ಮಂಗಲ ಶ್ರೀಮದನಂತನಿಗೇ । ಜಯ । ಮಂಗಲ ಶುಭ ಫಲದಾಯಕಗೇ ॥ ಮಂಗಲಂ॥ ಪಲ್ಲ ॥ ಚ್ಯುತಿರಹಿತಚ್ಯುತನಿಗೆ ಮುನಿನುತಗುಣ । ಯುತ ಪ್ರತಿರಹಿತಪ್ರತಿಮನಿಗೇ ॥ ಶ್ರುತಿ ಸ್ಮೃತಿಸನ್ನುತ ಚರಿತಗೆ ರತಿಪತಿ । ಪಿತ ಕ್ಷಿತಿಹತ ಸುನ್ನತಯುತಗೇ ॥ ಮಂಗಲಂ ॥ ೧ ॥ ಅಂತರಹಿತ ಶ್ರೀಅನಂತನಿಗಾದಿ ಮ । ಧ್ಯಾಂತಶೂನ್ಯ ಪುರುಷೋತ್ತಮಗೇ ॥ ಚಿಂತಿತ ಪ್ರದ ಸರ್ವಾಂತರ್ಯಾಮಿಗೆ । ಕುಂತೀಸುತರಕ್ಷಿತ ಹರಿಗೇ ॥ ಮಂಗಲಂ ॥ ೨ ॥ ಅಂಕುಶಧ್ವಜ ರೇಖಾಂಕಿತ ಚರಣಗೆ । ಪಂಕಜ ಮಾಲಾಲಂಕೃತಗೇ ॥ ಶಂಕರಸಖ ವಳಲಂಕೆಯ ಶ್ರೀಗುರು । ವೆಂಕಟರಮಣ ನೃಸಿಂಹನಿಗೇ ॥ ಮಂಗಲಂ ॥ ೩ ॥ ೨೫೬ ॥

ಯಕ್ಷಗಾನ ಅನಂತನವ್ರತಮಹಾತ್ಮೆ ಸಂಪೂರ್ಣವು

ಶ್ರೀಕೃಷ್ಣಾರ್ಪಣಮಸ್ತು

Scanned by CamScanner